## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 703 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 19-09-2022 |
| **ಪ್ರಶ್ನೆ** | | **ಉತ್ತರ** |
| (ಅ) | ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-2022ರ ಅನುಷ್ಠಾನ ಯಾವ ಹಂತದಲ್ಲಿದೆ; ರಾಜ್ಯ ಸರ್ಕಾರ ಅತ್ಯಂತ ತರಾತುರಿಯಲ್ಲಿ ಈ ನೀತಿಯನ್ನು ಅನುಷ್ಠಾನಗೊಳಿಸಲು ಕಾರಣಗಳೇನು; | ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಮುನ್ನ ಕಾರ್ಯಪಡೆಯನ್ನು ರಚಿಸಲಾಗಿದ್ದು, ಕಾರ್ಯಪಡೆಯ ಅನುಷ್ಠಾನ ವರದಿಯಂತೆ ಸಚಿವ ಸಂಪುಟದ ಅನುಮೋದನೆಯಾಗಿರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಮುನ್ನ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ ನಿರ್ಧರಿಸಲಾಗಿದೆ ಹಾಗೂ ವಿಷಯ ತಜ್ಞರು ಹಾಗೂ ವಿಶ್ವವಿದ್ಯಾಲಯಗಳ ಕುಲಪತಿಗಳು, ಶಾಲಾ ಕಾಲೇಜುಗಳ ಪ್ರಾಂಶುಪಾಲರು ಮತ್ತು ಬೋಧಕ ಸಿಬ್ಬಂದಿ ವರ್ಗದವರೊಂದಿಗೆ ವಿಸ್ತೃತವಾಗಿ ಚರ್ಚಿಸಿ/ಸಮಾಲೋಚಿಸಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಿ ಆದೇಶಿಸಿದೆ. ಹತ್ತು ವರ್ಷಗಳ ಕಾಲದ ಯೋಜನೆಯ ಪ್ರಾರಂಭಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳಲಾಗಿದೆ.<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳನ್ನು ನೋಡಲ್ ಏಜೆನ್ಸಿಗಳನ್ನಾಗಿ ಗುರುತಿಸಲಾಗಿದೆ. ಸದರಿ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಕಾಲೇಜುಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸರ್ಕಾರದ ಹಾಗೂ ಯುಜಿಸಿ ಮಾರ್ಗಸೂಚಿಗಳನುಸಾರ ಜಾರಿಗೆ ತರಲು ಹಲವಾರು ಕಾರ್ಯಕ್ರಮಗಳನ್ನು, ಸೆಮಿನಾರ್, ಕಾರ್ಯಗಾರ, ತರಬೇತಿ, ವಿಷಯ ತಜ್ಞರ ಮೂಲಕ ಕೈಗೊಳ್ಳಲಾಗುತ್ತಿದೆ.<br><br>ಆದರಿಂದ, ತರಾತುರಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುತ್ತಿಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ವಿದ್ಯಾರ್ಥಿ ಸ್ನೇಹಿಯಾಗಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ಕೊಡುತ್ತದೆ. ಅಂದರೆ, ಅವರ ಸಂಪೂರ್ಣ ವ್ಯಕ್ತಿತ್ವ ರೂಪಿಸುವುದಲ್ಲದೇ ಅವರನ್ನು ಉದ್ಯೋಗರ್ಹರನ್ನಾಗಿ ಮಾಡಲು ಒತ್ತು ಕೊಡುತ್ತದೆ. ಅದು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತಂದು ಉನ್ನತ ಶಿಕ್ಷಣವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಆಶಯವನಿಟ್ಟುಕೊಂಡಿದೆ. ಹಾಗಾಗಿ, ಪ್ರವೇಶ, ಸಮಾನತೆ ಮತ್ತು ಒಳಗೊಳ್ಳುವಿಕೆಗೂ (access, equity, and inclusiveness) ಒತ್ತುಕೊಡುತ್ತದೆ. |

| | | |
|---|---|---|
| | | ಪ್ರಸಕ್ತ ಸಾಲಿನಲ್ಲಿ ಅವಶ್ಯವಿರುವ ಎಲ್ಲ ಕ್ರಮಗಳನ್ನು ವಹಿಸಲಾಗಿದೆ. ಉದಾಃ ಪಠ್ಯ ಕ್ರಮಗಳ ಕುರಿತು ವಿಷಯವಾರು ಹಲವಾರು ಸಮಿತಿಗಳನ್ನು ರಚಿಸಿ ಮಾದರಿ ಪಠ್ಯಕ್ರಮಗಳನ್ನು ರಚಿಸಿ ವಿಶ್ವವಿದ್ಯಾಲಯಗಳಿಗೆ ಹಾಗೂ ಅದರ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ಜಾರಿಗೆ ತರಲು ಕ್ರಮವಹಿಸಲಾಗಿದೆ.<br><br>ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ (ರಾಜ್ಯ ಸರ್ಕಾರ/ಖಾಸಗಿ) ಎನ್.ಇ.ಪಿ ಜಾರಿಗೆ ತರುವ ನಿಟ್ಟಿನಲ್ಲಿ ಹಲವಾರು ಸೆಮಿನಾರ್‌ಗಳನ್ನು ನಡೆಸಿ ಬೋಧಕ ವರ್ಗಕ್ಕೆ ಸಾಕಷ್ಟು ಮಾಹಿತಿ ಮತ್ತು ತಿಳುವಳಿಕೆ ನೀಡಲಾಗಿದೆ. ಇದಲ್ಲದೇ, Karnataka Higher Education Academy, Dharwad ದಿಂದ ರಾಜ್ಯದ ಎಲ್ಲಾ ಬೋಧಕರಿಗೆ ಉಚಿತವಾಗಿ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ ಮತ್ತು ಹಲವು ವಿಶ್ವವಿದ್ಯಾಲಯಗಳಲ್ಲಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳ (ಹಿಂದಿನ Academic Staff College) ಗಳ ಮುಖಾಂತರ ತರಬೇತಿ ನೀಡಲು ಕ್ರಮವಹಿಸಲಾಗಿದೆ.<br><br>ಎನ್.ಇ.ಪಿ-2020ರ ಅನುಷ್ಠಾನದ ವಿವರಗಳನ್ನು **ಅನುಬಂಧ-1, 2 ಮತ್ತು 3 ರಲ್ಲಿ** ಲಗತ್ತಿಸಿದೆ. |
| (ಆ) | ಈ ನೀತಿಯಡಿ ಅವಶ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಸರ್ಕಾರದ ಆದೇಶ ಸಂಖ್ಯೆ: ಇಡಿ 25 EGOV 2021, ದಿನಾಂಕ: 11-10-2021ರಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ – 111ರ ಘೋಷಣೆಯಂತೆ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೆಲವೊಂದು ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ, 2021-22ನೇ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಬಗ್ಗೆ ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಲು ಕಾರ್ಯಗಾರ ಹಮ್ಮಿಕೊಳ್ಳುವ ಸಲುವಾಗಿ ಲೆಕ್ಕ ಶೀರ್ಷಿಕೆ 2202-03-112-0-17- ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು – 059 ಇತರೆ ಖರ್ಚುಗಳ ಅಡಿಯಲ್ಲಿ ರೂ. 200.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |

**ಸಂಖ್ಯೆ: ಇಡಿ 256 ಯುಎನ್‌ಇ 2022**

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ - ಬಿಟಿ, ವಿಜ್ಞಾನ
ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ,
ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು.

ಅನುಬಂಧ-1

**ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನ**

ವಿಶ್ವ ಆರ್ಥಿಕ ವೇದಿಕೆಯ Future of Jobs-2020 ವರದಿಯ ಪ್ರಕಾರ ತಂತ್ರಜ್ಞಾನ ಜಾಗತೀಕರಣಗಳು ಕಾರ್ಮಿಕ ಮಾರುಕಟ್ಟೆಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿವೆ. ತಾಂತ್ರಿಕ ಅಡಚಣೆಗಳು ಸಮಗ್ರ ಮಟ್ಟದಲ್ಲಿ ಅವಕಾಶಗಳನ್ನು ಕುಂಠಿತಗೊಳಿಸುತ್ತವೆ ಮತ್ತು ಹೊಸ ಉದ್ಯೋಗ ಅವಕಾಶಗಳು ಸೃಷ್ಟಿ ಆಗುವುದನ್ನು ನಾವು ಕಾಣಬಹುದಾಗಿದೆ. ದೇಶ-ವಿದೇಶಗಳಲ್ಲಿ ಮತ್ತು ಪೂರೈಕೆ ಸರಪಣಿಗಳಲ್ಲಿ ಕೈಗೊಳ್ಳಲಾದ ಸಂಶೋಧನೆಯ ಪ್ರಕಾರ ಹಸ್ತ ಚಾಲಿತ ವಾಡಿಕೆಯ ಉದ್ಯೋಗಗಳ ಗಣನೀಯ ಯಾಂತ್ರೀಕರಣದೊಂದಿಗೆ ವಾಡಿಕೆಯೇತರ ವಿಶ್ಲೇಷಣಾ ಉದ್ಯೋಗಾವಕಾಶಗಳಿಗೆ ಬೇಡಿಕೆಯು ವೃದ್ಧಿಸುತ್ತಿದೆ.

ಈ ವರದಿಯ ಪ್ರಕಾರ ಇತ್ತೀಚಿನ ಕೆಲವು ವರ್ಷಗಳ ಪ್ರವೃತ್ತಿಯಂತೆ Cloud Computing, Big Data ಮತ್ತು E-Commerce ಗಳಿಗೆ ಹೆಚ್ಚಿನ ಆದ್ಯತೆ ಇದೆ. ಆದರೆ, ಗೂಢಲಿಪೀಕರಣದಲ್ಲಿ ಹೆಚ್ಚಿನ ಆಸಕ್ತಿ ಹೆಚ್ಚುತ್ತಿರುವುದು ನಮ್ಮ ಡಿಜಿಟಲ್ ಯುಗದ ಹೊಸ ದುರ್ಬಲತೆಗಳನ್ನು ಪ್ರತಿಬಿಂಬಿಸುತ್ತದೆ. ಹಲವಾರು ಉದ್ಯಮಗಳು ಮಾನವೇತರ ರೋಬೋಟ್‌ಗಳನ್ನು ಮತ್ತು ಕೃತಕ ಬುದ್ಧಿಮತ್ತೆಯನ್ನು ಗಣನೀಯವಾಗಿ ಅಳವಡಿಸಿಕೊಳ್ಳುತ್ತಿವೆ. ಈ ಎರಡೂ ತಂತ್ರಜ್ಞಾನಗಳು ನಿಧಾನವಾಗಿ ಎಲ್ಲಾ ಕೈಗಾರಿಕೆಗಳಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತಿವೆ.

2025 ಕ್ಕೆ ಅವಶ್ಯಕವಾದ 15 ಪ್ರಮುಖ ಕೌಶಲ್ಯಗಳು ಈ ವರದಿಯಂತೆ ಹೀಗಿವೆ:

ವಿಶ್ಲೇಷಣಾತ್ಮಕ ಆಲೋಚನೆ ಮತ್ತು ನಾವೀನ್ಯತೆ, ಸಕ್ರಿಯ ಕಲಿಕೆ ಮತ್ತು ಕಲಿಕಾ ತಂತ್ರಗಳು, ಕ್ಲಿಷ್ಟಕರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದು, ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣೆ, ಸೃಜನ ಶೀಲತೆ – ಸ್ವಂತಿಕೆ ಮತ್ತು ಉಪಕ್ರಮ, ನಾಯಕತ್ವ ಮತ್ತು ಸಾಮಾಜಿಕ ಪ್ರಭಾವ, ತಂತ್ರಜ್ಞಾನದ ಬಳಕೆ – ಮೇಲ್ವಿಚಾರಣೆ ಮತ್ತು ನಿಯಂತ್ರಣ, ತಂತ್ರಜ್ಞಾನ ವಿನ್ಯಾಸ ಮತ್ತು ಪ್ರೋಗ್ರಾಮಿಂಗ್, ತಾರ್ಕಿಕ – ಸಮಸ್ಯೆ ಪರಿಹಾರ ಮತ್ತು ಕಲ್ಪನೆ, ಭಾವನಾತ್ಮಕ ಬುದ್ಧಿವಂತಿಕೆ, ಸೇವಾ ದೃಷ್ಟಿಕೋನ, ವ್ಯವಸ್ಥೆಗಳ ವಿಶ್ಲೇಷಣೆ ಮತ್ತು ದೃಷ್ಟಿಕೋನ, ಮನವೊಲಿಸುವುದು ಮತ್ತು ಸಮಾಲೋಚನೆ ಮತ್ತು ಸ್ಥಿತಿಸ್ಥಾಪಕತ್ವ – ಒತ್ತಡ ಸಹಿಷ್ಣುತೆ ಮತ್ತು ನಮ್ಯತೆ

ಕರ್ನಾಟಕ ರಾಜ್ಯವು ತಂತ್ರಜ್ಞಾನಾಧಾರಿತ ನಾವೀನ್ಯತೆಗಳು ಮತ್ತು ಆರ್ಥಿಕ ಲಾಭಗಳಿಗೆ ಸಂಬಂಧಿಸಿದಂತೆ ಪ್ರಮುಖ ಕೊಡುಗೆ ನೀಡುವ ಹಾಗೂ ಅದರಿಂದ ಲಾಭ ಪಡೆಯುತ್ತಿರುವ ರಾಜ್ಯವಾಗಿದೆ. ಬೆಂಗಳೂರು ಜಗತ್ತಿನ ಪ್ರಮುಖ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕೇಂದ್ರಗಳಲ್ಲಿ ಒಂದಾಗಿದೆ. ಇದು ಸರ್ಕಾರದ ಸ್ನೇಹಪರ ನೀತಿಗಳು ಮತ್ತು ನಾವೀನ್ಯತೆಗೆ ಉತ್ತೇಜನ ನೀಡುವ ಪರಿಸರದ ಅಸ್ತಿತ್ವದಿಂದ ಸಾಧ್ಯವಾಗಿದೆ. ನಾವು ಈ ಸ್ಥಾನವನ್ನು ಬಲಪಡಿಸಲು ಬದ್ಧರಾಗಿದ್ದೇವೆ.

**ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಯು 21ನೇ ಶತಮಾನದ ಅವಶ್ಯಕತೆಗಳನ್ನು ಪೂರೈಸಲು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರಲು ಐತಿಹಾಸಿಕ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಈ ನೀತಿಯು** Future of Jobs-2020 ವರದಿಯಲ್ಲಿರುವ ವಿಷಯಗಳನ್ನು ಕುರಿತು ಚರ್ಚಿಸುತ್ತವೆ ಮತ್ತು ಅದಕ್ಕಿಂತ ಹೆಚ್ಚಿನದನ್ನು ಒಳಗೊಂಡಿದೆ. ಕರ್ನಾಟಕ ರಾಜ್ಯವು ಈ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ಮುಂಚೂಣಿಯಲ್ಲಿದೆ. **NEP-2020 ರ ಆಶಯಗಳನ್ನು ಪೂರೈಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ.**

1. ಆಡಳಿತ

   a) ಉನ್ನತ ಶಿಕ್ಷಣದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾರ್ವಜನಿಕ ಬದ್ಧತೆಯನ್ನು ತರಲು ಪೂರಕವಾದ ಎರಡು ಕಾಯ್ದೆಗಳನ್ನು ಪರಿಚಯಿಸಲಾಗುತ್ತಿದೆ ಅವೆಂದರೆ: ಕರ್ನಾಟಕ ಶಿಕ್ಷಣ

Executive Director

1

ಆಯೋಗ ಕಾಯ್ದೆ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಂಸ್ಥೆಗಳ ಕಾಯ್ದೆ (Karnataka Shikshana Aayoga Bill and Karnataka State Higher Education Institutions Bill)

b) ತಂತ್ರಜ್ಞಾನದ ಬಳಕೆ – ಉನ್ನತ ಶಿಕ್ಷಣದ ಎಲ್ಲಾ ಪಾಲುದಾರರೊಂದಿಗೆ ನಿರಂತರ ಸಂಪರ್ಕವನ್ನು ಹೊಂದಲು UUCMS ಮತ್ತು ಕಲಿಕಾ ಅನುಬವದಲ್ಲಿ ಗುಣಮಟ್ಟವನ್ನು ವೃದ್ಧಿಸಲು LMS ನ್ನು ಪರಿಚಯಿಸಲಾಗಿದೆ.

2. ಶಿಕ್ಷಣವನ್ನು ಇಂದಿನ ಹಾಗೂ ನಾಳೆಯ ಶಿಕ್ಷಣದ ಅವಶ್ಯಕತೆಗಳನ್ನು ಪೂರೈಸಲು ಪ್ರಸ್ತುತವಾಗಿರುವಂತೆ ರೂಪಿಸುವುದು.

a) ಕೈಗಾರಿಕೆಗಳ ಅಗತ್ಯಕ್ಕೆ ತಕ್ಕಂತೆ ಪಠ್ಯಕ್ರಮವನ್ನು ರೂಪಿಸಲು ಔಪಚಾರಿಕ ಮಂಡಳಿಗಳು ಮತ್ತು ಸಹಯೋಗದ ಮೂಲಕ ಉದ್ಯಮಿಗಳನ್ನು ತೊಡಗಿಸುವುದು. ಇದಕ್ಕೆ ಸಂಬಂಧಿಸಿದಂತೆ ಮಾಡಿಕೊಳ್ಳಲಾದ ಕೆಲವು ಪ್ರಮುಖ ಉಪಕ್ರಮಗಳೆಂದರೆ – NASSCOM, Logistics Sector Skills Council, National Stock Exchange ಗಳೊಂದಿಗಿನ ಒಡಂಬಡಿಕೆಗಳಾಗಿವೆ. ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಎನ್.ಇ.ಪಿ ಯ ಅನುಷ್ಠಾನಕ್ಕೆ ಉದ್ಯಮದ ಪ್ರಾತಿನಿಧ್ಯದೊಂದಿಗೆ ಅನುಷ್ಠಾನ ಕಾರ್ಯಪಡೆಯನ್ನು ರಚಿಸಲಾಗಿದೆ.

b) ಕೌಶಲ್ಯ ಮತ್ತು ಉದ್ಯೋಗದ ಮೇಲೆ ಹಾಗೂ ಫಲಿತಾಂಶ ಕೇಂದ್ರೀಕೃತವಾದ ಮಾದರಿ ಪಠ್ಯಕ್ರಮವನ್ನು ರೂಪಿಸಲು 40 ಸಮಿತಿಗಳನ್ನು ರಚಿಸಿ, ರಾಜ್ಯಾದ್ಯಂತ ಇರುವ ಸುಮಾರು 1000 ಪ್ರಾಧ್ಯಾಪಕರ ಪ್ರಾವೀಣ್ಯತೆಯನ್ನು ಬಳಸಿಕೊಳ್ಳಲಾಯಿತು.

c) ಸಮಸ್ಯೆ ಆಧಾರಿತ ಮತ್ತು ಯೋಜನಾ ಆಧಾರಿತ ಕಲಿಕೆ, ಸೇವಾ ಕಲಿಕೆ, ಪ್ರಾಯೋಗಿಕ ಕಲಿಕೆ ಇತ್ಯಾದಿ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಕ್ರಮಗಳನ್ನು ಪರಿಚಯಿಸಲಾಗಿದೆ.

d) ತಾಂತ್ರಿಕ ಮತ್ತು ತಾಂತ್ರಿಕೇತರ ಪದವಿ ಕಾರ್ಯಕ್ರಮಗಳಲ್ಲಿ ಕೈಗಾರಿಕಾ Internship ನ್ನು ಕಡ್ಡಾಯಗೊಳಿಸಿ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಈ Internship ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು NASSCOM, BOAT, ಮತ್ತು MSME ಮುಂತಾದ ಸಂಸ್ಥೆಗಳೊಂದಿಗೆ ಸಹಯೋಗವನ್ನು ಏರ್ಪಡಿಸಲಾಗುತ್ತಿದೆ.

e) ಭಾರತ ಸರ್ಕಾರದ Sector Skills Councils ದ Apprenticeship Embedded Degree programs ಜೊತೆಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ

f) ಪಠ್ಯಕ್ರಮದಲ್ಲಿ 40 ಪ್ರತಿಶತ ಆನ್‌ಲೈನ್ ಮತ್ತು ಬ್ಲೆಂಡೆಡ್ ಕಲಿಕೆಗೆ ಅವಕಾಶವಿದ್ದು ವಿಶ್ವವಿದ್ಯಾಲಯಗಳು ಉದಯೋನ್ಮುಖ ಮಾರುಕಟ್ಟೆಗಳು ಮತ್ತು ತಂತ್ರಜ್ಞಾನಗಳನ್ನು ಗಮನದಲ್ಲಿರಿಸಿಕೊಂಡು ಬುದ್ಧಿವಂತಿಕೆಯಿಂದ ಸೂಕ್ತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ ಎಂಬ ನಿರೀಕ್ಷೆ ಇದೆ.

g) ಪಠ್ಯಕ್ರಮದಲ್ಲಿ ಕೌಶಲ್ಯವರ್ಧನಾ ಕೋರ್ಸ್‌ಗಳಿಗೆ ವಿಶೇಷ ಆದ್ಯತೆ ಇದೆ. ಲಭ್ಯವಿರುವ ಉದ್ಯೋಗವಕಾಶಗಳು, ರಾಷ್ಟ್ರೀಯ ಮಾನದಂಡಗಳು ಮತ್ತು ಸಂಪನ್ಮೂಲಗಳ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಈ ಕೋರ್ಸ್‌ಗಳನ್ನು National Occupational Standards (NOS) of National Skills Qualifications Framework (NSQF) ಗಳಿಗೆ ಸರಿಹೊಂದುವಂತೆ ಸಿದ್ಧಪಡಿಸಲಾಗುತ್ತಿದೆ. ನಮ್ಮ ಸರ್ಕಾರವು Sector Skills Councils

Executive Director
rnataka State Higher Educatio...

ಗಳೊಂದಿಗೆ ಈ ಕೊರ್ಸ್‌ಗಳನ್ನು ರೂಪಿಸಲು ಮತ್ತು ಅವುಗಳನ್ನು ನೀಡಲು ಒಪ್ಪಂದಗಳನ್ನು ಮಾಡಿಕೊಳ್ಳುತ್ತಿವೆ. ಅಂತಹ ಒಂದು ಉದಾಹರಣೆ ಎಂದರೆ, Digital Fluency, Artificial Intelligence and Cyber Security ಕೊರ್ಸ್‌ಗಳನ್ನು ನೀಡಲು ಭಾರತ ಸರ್ಕಾರದ Sector Skills Councils ದ Apprenticeship Embedded Degree programs ಜೊತೆಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ NASSCOM ದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ.ಈ ಕೋರ್ಸ್‌ಗಳು National Occupational Standards (NOS) ಗೆ ಪೂರಕವಾಗಿದ್ದು, ನಮ್ಮ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ವೃದ್ಧಿಸಲು ಸಹಾಯಕವಾಗಿವೆ.

3. ಉನ್ನತ ಶಿಕ್ಷಣದ ಅಂತರಾಷ್ಟ್ರೀಕರಣ –
   a) ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯತೆಗಳಲ್ಲಿ ಗುಣಮಟ್ಟವನ್ನು ಸುಧಾರಿಸಲು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಹಯೋಗವನ್ನು ಏರ್ಪಡಿಸಲಾಗುತ್ತಿದೆ. ಇದರಿಂದ ನಮ್ಮ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರುಗಳಿಗೆ ವಿಶ್ವದ ಅತ್ಯುನ್ನತ ಅನುಭವಗಳು ಮತ್ತು ಪ್ರತಿಫಲಗಳು ದೊರೆಯಲು ಸಾಧ್ಯವಾಗುತ್ತದೆ.
   b) British Council, Pennsylvania State Hub for Higher Education, USA ಗಳೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.

Executive Director
Karnataka State Higher Education Council

ಉ.ಸಾ 2015-2

# ರಾಷ್ಟ್ರೀಯ ಶಿಕ್ಷಣ ನೀತಿ 2020: ಕರ್ನಾಟಕ ರಾಜ್ಯದ ಅನುಷ್ಠಾನ ಯೋಜನೆ

*****

## ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಹಿನ್ನೆಲೆ

- ರಾಷ್ಟ್ರೀಯ ಶಿಕ್ಷಣ ನೀತಿ–2020, **ಡಾ.ಕಸ್ತೂರಿರಂಗನ್ ನೇತೃತ್ವದ ಸಮಿತಿಯು ಸಲ್ಲಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡನ್ನು** ಆಧರಿಸಿದೆ
- ರಾಷ್ಟ್ರೀಯ ಶಿಕ್ಷಣ ನೀತಿ–2020, **34 ವರ್ಷಗಳಷ್ಟು ಹಳೆಯದಾದ** ರಾಷ್ಟ್ರೀಯ ಶಿಕ್ಷಣ ನೀತಿ ಸ್ಥಾನವನ್ನು ಅಲಂಕರಿಸುತ್ತಿದೆ
- **ಗ್ರಾಮ ಪಂಚಾಯತಿಗಳಿಂದ ಹಿಡಿದು ರಾಷ್ಟ್ರ ಮಟ್ಟದವರೆಗೆ** ಸಮಾಲೋಚನೆ ನಡೆಸಲಾಗಿದೆ
- **ರಾಷ್ಟ್ರೀಯ ಶಿಕ್ಷಣ ನೀತಿ–2019 ರ ಕರಡನ್ನು** 22 ಭಾಷೆಗಳಲ್ಲಿ ಪ್ರಕಟಿಸಲಾಗಿದೆ
- **ಬೃಹತ್ ವ್ಯಾಪ್ತಿಯ ಸಮಾಲೋಚನಾ ಪ್ರಕ್ರಿಯೆಯ** ನಂತರ ರಾಷ್ಟ್ರೀಯ ಶಿಕ್ಷಣ ನೀತಿ–2020 ನ್ನು ರೂಪಿಸಲಾಗಿದೆ

## ರಾಷ್ಟ್ರೀಯ ಶಿಕ್ಷಣ ನೀತಿ–2020 ರ ದೃಷ್ಟಿಕೋನ

- ಭಾರತೀಯ ಸಿದ್ಧಾಂತಗಳಲ್ಲಿ ಆಳವಾಗಿ ಬೇರೂರಿ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಭಾರತವನ್ನು ಚಿರಸ್ಥಾಯಿಯಾಗಿರುವ, ನ್ಯಾಯಸಮ್ಮತವೂ, ಸ್ಪಂದನಶೀಲವೂ ಆದ ಜ್ಞಾನಮಯ ಸಮಾಜವಾಗಿ ನೇರವಾಗಿ ಪರಿವರ್ತಿಸಬಲ್ಲ; **ಭಾರತವನ್ನು ಜಾಗತಿಕ ಜ್ಞಾನ ಮಹಾಶಕ್ತಿಯಾಗಿ** ರೂಪಿಸಬಲ್ಲ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುವುದಾಗಿದೆ.
- ವಿದ್ಯಾರ್ಥಿಗಳಲ್ಲಿ ಭಾರತೀಯತೆಯ ಕುರಿತು ಕೇವಲ ತಮ್ಮ ಆಲೋಚನೆಗಳಲ್ಲಷ್ಟೇ ಅಲ್ಲದೆ ಭಾವನೆ, ಬುದ್ಧಿ ಮತ್ತು ಕಾರ್ಯಗಳಲ್ಲೂ ಆಳವಾದ ಅಭಿಮಾನವನ್ನು ಮೂಡಿಸುವುದು.
- ಮಾನವ ಹಕ್ಕುಗಳು, ಸುಸ್ಥಿರ ಅಭಿವೃದ್ಧಿ ಹಾಗೂ ಸಹ ಬಾಳ್ವೆ ಮತ್ತು ಜಾಗತಿಕ ಸ್ವಾಸ್ಥ್ಯಗಳನ್ನು ಜವಾಬ್ದಾರಿಯುತವಾಗಿ ಬೆಂಬಲಿಸುವ ಜ್ಞಾನ, ಕೌಶಲ್ಯಗಳು, ಮೌಲ್ಯಗಳು ಮತ್ತು ಮನೋಭಾವಗಳನ್ನು ಅಭಿವೃದ್ಧಿಪಡಿಸುವುದು, **ನಿಜವಾದ ಅರ್ಥದಲ್ಲಿ ವಿಶ್ವ ನಾಗರಿಕರಾಗಿ ರೂಪಿಸುವುದು.**

## ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಉದ್ದೇಶಗಳು

- ಶಿಕ್ಷಣವು **ಚಾರಿತ್ರ್ಯವನ್ನು** ನಿರ್ಮಾಣ ಮಾಡಬೇಕು. ವಿದ್ಯಾರ್ಥಿಗಳು **ನೀತಿವಂತರೂ, ವಿಚಾರವಂತರೂ, ದಯಾವಂತರೂ ಹಾಗೂ ಕಳಕಳಿಯುಳ್ಳವರೂ** ಆಗಿರುವಂತೆ ರೂಪಿಸುವುದೇ ಅಲ್ಲದೆ, ಲಾಭದಾಯಕವೂ ಸಾರ್ಥಕತೆಯನ್ನು ಮೂಡಿಸುವಂಥದ್ದೂ ಆದ ಉದ್ಯೋಗಕ್ಕೆ ಸಿದ್ಧಪಡಿಸಬೇಕು.



Executive Director,
Karnataka State Higher Education Cou

- ಶೈಶವಾವಸ್ಥೆಯಲ್ಲಿನ ಶಿಕ್ಷಣದಿಂದ ಮೊದಲುಗೊಂಡು, ಉನ್ನತ ಶಿಕ್ಷಣದ ಮೂಲಕ ನೀಡುವ ಶಿಕ್ಷಣದವರೆಗೆ, ವ್ಯವಸ್ಥೆಯಲ್ಲಿ ಅತ್ಯುನ್ನತ ಗುಣಮಟ್ಟ, ಸಮಾನತೆ ಮತ್ತು ಪ್ರಾಮಾಣಿಕತೆಯನ್ನು ತರಬಲ್ಲ ಪ್ರಮುಖ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ, ಪ್ರಸ್ತುತ ಪರಿಸ್ಥಿತಿಯಲ್ಲಿನ ವಿದ್ಯಾಭ್ಯಾಸದ ಮತ್ತು ಅಪೇಕ್ಷಿತ ಶಿಕ್ಷಣದ ಪರಿಣಾಮಗಳ ನಡುವಿನ ಅಂತರವನ್ನು ಭರ್ತಿ ಮಾಡತಕ್ಕದ್ದು.

- ಸುಸ್ಥಿರ ಅಭಿವೃದ್ಧಿಯ ಗುರಿ–4 (SDG4) ನ್ನೂ ಒಳಗೊಂಡಂತೆ 21ನೇ ಶತಮಾನದ ಶಿಕ್ಷಣದ ಆಕಾಂಕ್ಷಾಪೂರ್ಣ ಗುರಿಗಳಿಗೆ ಪೂರಕವಾಗಿರುವ ನೂತನ ವ್ಯವಸ್ಥೆಯನ್ನು ಭಾರತೀಯ ಪರಂಪರೆ ಮತ್ತು ಮೌಲ್ಯಗಳನ್ನು ಆಧರಿಸಿ ಸೃಜಿಸಲು **ಶಿಕ್ಷಣದ ಸಂರಚನೆಯ ಎಲ್ಲ ಆಯಾಮಗಳು, ನಿಯಂತ್ರಣ ಹಾಗೂ ಆಡಳಿತದ ಪರಿಷ್ಕರಣೆ ಮತ್ತು ಪುನರ್ನಿರ್ಮಾಣ.**

- ಪ್ರತಿಯೊಬ್ಬ ವ್ಯಕ್ತಿಯಲ್ಲಿ **ಸೃಜನಶೀಲ ಸತ್ವದ ಅಭಿವೃದ್ಧಿ**

- ವಿದ್ಯಾಭ್ಯಾಸವು ಸಾಕ್ಷರತೆ ಮತ್ತು ಸಂಖ್ಯಾತ್ಮಕತೆಗಳೆರಡರಲ್ಲೂ **'ಮೂಲಭೂತ ಸಾಮರ್ಥ್ಯ'**ಗಳನ್ನು, ತರ್ಕಬದ್ಧ ಆಲೋಚನೆ ಮತ್ತು ಸಮಸ್ಯೆಗಳನ್ನು ಬಿಡಿಸುವುದು, ಇವೇ ಮೊದಲಾದ **'ಉನ್ನತ ಸ್ತರ'ದ ಬೌದ್ಧಿಕ ಸಾಮರ್ಥ್ಯಗಳನ್ನು**, ಸಾಮಾಜಿಕ, ನೈತಿಕ, ಭಾವನಾತ್ಮಕ ಸಾಮರ್ಥ್ಯಗಳನ್ನು ಮತ್ತು ಮನೋಭಾವಗಳನ್ನು ಅಭಿವೃದ್ಧಿ ಪಡಿಸಬೇಕು.

## ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಭೂತ ತತ್ವಗಳು:

- ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಕ್ಷೇತ್ರಗಳೆರಡರಲ್ಲಿ ಪ್ರತಿ ವಿದ್ಯಾರ್ಥಿಯ ಸಂಪೂರ್ಣ ಬೆಳವಣಿಗೆಯನ್ನು ಉತ್ತೇಜಿಸಲು ಶಿಕ್ಷಕರು ಮತ್ತು ಪೋಷಕರಿಗೆ ಅರಿವು ಮೂಡಿಸುವ ಮೂಲಕ **ಪ್ರತಿ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸುವುದು ಮತ್ತು ಬೆಳೆಸುವುದು;**

- 3ನೇ ತರಗತಿಯ ವೇಳೆಗೆ ಎಲ್ಲಾ ವಿದ್ಯಾರ್ಥಿಗಳು ಬುನಾದಿ **ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನವನ್ನು** ಹೊಂದಲು ಹೆಚ್ಚಿನ ಆದ್ಯತೆಯನ್ನು ನೀಡುವುದು;

- ನಮ್ಯತೆಯಿಂದಾಗಿ ಕಲಿಯುವವರು ತಮ್ಮ ಕಲಿಕೆಯ ಪಥವನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ಕೆ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಆ ಮೂಲಕ ಅವರ ಪ್ರತಿಭೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಜೀವನದಲ್ಲಿ ತಮ್ಮದೇ ಆದ ಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

- ಕಲಿಕೆಯ ವಿವಿಧ ಕ್ಷೇತ್ರಗಳ ನಡುವಿನ ಅಪಾಯಕಾರಿ ಶ್ರೇಣೀಕರಣ ಮತ್ತು ವ್ಯತ್ಯಾಸಗಳನ್ನು ಹೋಗಲಾಡಿಸಲು ಕಲೆ ಮತ್ತು ವಿಜ್ಞಾನಗಳ ನಡುವೆ, ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ, ವೃತ್ತಿಪರ ಮತ್ತು ಶೈಕ್ಷಣಿಕ ವಿಷಯಗಳ ನಡುವೆ ಕಠಿಣ ವಿಭಜನೆಗಳಿಲ್ಲದ ಶಿಕ್ಷಣ ವ್ಯವಸ್ಥೆಯ ರೂಪಣೆ.

- ಜ್ಞಾನದ ಏಕತೆ ಮತ್ತು ಸಮಗ್ರತೆಯನ್ನು ಖಚಿತಪಡಿಸಿಕೊಳ್ಳಲು **ಬಹುವಿಷಯಗಳುಳ್ಳ ಹಾಗೂ ಸಮಗ್ರವಾದ ಶಿಕ್ಷಣ** ನೀಡುವುದು. ವಿಜ್ಞಾನ, ಸಾಮಾಜಿಕ ವಿಜ್ಞಾನ, ಕಲೆ, ಮಾನವಿಕ ವಿಷಯಗಳು ಮತ್ತು ಕ್ರೀಡೆಗಳಲ್ಲಿ ಸಮಗ್ರ ಶಿಕ್ಷಣ;

- ಪರೀಕ್ಷೆಗಾಗಿ ಕಲಿಕೆ ಮತ್ತು ಯಾಂತ್ರಿಕ ಕಲಿಕೆಗಿಂತ ಪರಿಕಲ್ಪನಾ ತಿಳುವಳಿಕೆಗೆ ಒತ್ತು;



Executive Director
aka State Higher Education Council

- ತಾರ್ಕಿಕ ನಿರ್ಧಾರ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ;

- ನೈತಿಕತೆ ಮತ್ತು ಮಾನವೀಯ ಹಾಗೂ ಸಾಂವಿಧಾನಿಕ ಮೌಲ್ಯಗಳಾದ ಸಹಾನುಭೂತಿ, ಇತರರಿಗೆ ಗೌರವ, ಸ್ವಚ್ಛತೆ, ಸೌಜನ್ಯ, ಪ್ರಜಾಪ್ರಭುತ್ವ ಮನೋಭಾವ, ಸೇವಾ ಮನೋಭಾವ, ಸಾರ್ವಜನಿಕ ಆಸ್ತಿಗೆ ಗೌರವ, ವೈಜ್ಞಾನಿಕ ಮನೋಭಾವ, ಸ್ವಾತಂತ್ರ್ಯ, ಜವಾಬ್ದಾರಿ, ಬಹುತ್ವ, ಸಮಾನತೆ ಮತ್ತು ನ್ಯಾಯ;

- ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಾ ಮತ್ತು ಭಾಷಾ ಸಾಮರ್ಥ್ಯವನ್ನು ಉತ್ತೇಜಿಸುವುದು;

- ಸಂವಹನ, ಸಹಕಾರ, ಗುಂಪು ಕಾರ್ಯ ಮತ್ತು ನಮ್ಯತೆಯಂತಹ ಜೀವನ ಕೌಶಲ್ಯಗಳು;

- ಇಂದಿನ 'ಕೋಚಿಂಗ್ ಸಂಸ್ಕೃತಿಯನ್ನು' ಪ್ರೋತ್ಸಾಹಿಸುವ ಸಂಕಲನಾತ್ಮಕ ಮೌಲ್ಯಮಾಪನದ ಬದಲಾಗಿ ನಿಯಮಿತ ರಚನಾತ್ಮಕ ಮೌಲ್ಯಮಾಪನದತ್ತ ಗಮನ ಹರಿಸುವುದು;

- ಬೋಧನೆ ಮತ್ತು ಕಲಿಕೆಯಲ್ಲಿ ಭಾಷೆಯ ಅಡೆತಡೆಗಳನ್ನು ತೆಗೆದುಹಾಕುವಲ್ಲಿ, ವಿಕಲಚೇತನ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಹೆಚ್ಚಿಸುವಲ್ಲಿ ಮತ್ತು ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯಲ್ಲಿ ತಂತ್ರಜ್ಞಾನದ ವ್ಯಾಪಕ ಬಳಕೆ.

- ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿನ ವಿಷಯವಾಗಿದೆ ಎಂಬುದನ್ನು ಯಾವಾಗಲೂ ಗಮನದಲ್ಲಿಟ್ಟುಕೊಳ್ಳುತ್ತಾ ಎಲ್ಲಾ ಪಠ್ಯಕ್ರಮ, ಬೋಧನಾ ವಿಧಾನ ಮತ್ತು ನೀತಿಯಲ್ಲಿ ಸ್ಥಳೀಯ ಸಂದರ್ಭಕ್ಕೆ ಮತ್ತು ವೈವಿಧ್ಯತೆಗೆ ಗೌರವ ನೀಡುವುದು.

- ಎಲ್ಲಾ ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಲು ಸಮರ್ಥರಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಶೈಕ್ಷಣಿಕ ನಿರ್ಧಾರಗಳ ಮೂಲಾಧಾರವಾಗಿ ಪೂರ್ಣ ಸಮಾನತೆ ಮತ್ತು ಸಮನ್ವಯ ಸಾಧಿಸುವುದು.

- ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ಹಂತದಿಂದ ಶಾಲಾ ಶಿಕ್ಷಣದದವರೆಗೆ ಹಾಗೂ ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಎಲ್ಲಾ ಹಂತದ ಶಿಕ್ಷಣದ ಪಠ್ಯಕ್ರಮದಲ್ಲಿ ಸಮನ್ವಯ ಹೊಂದುವುದು.

- ಶಿಕ್ಷಕರು ಮತ್ತು ಸಿಬ್ಬಂದಿಯು ಕಲಿಕಾ ಪ್ರಕ್ರಿಯೆಯ ಹೃದಯವಾಗಿ – ಅವರ ನೇಮಕಾತಿ, ನಿರಂತರ ವೃತ್ತಿಪರ ಅಭಿವೃದ್ಧಿ, ಸಕಾರಾತ್ಮಕ ಕೆಲಸದ ವಾತಾವರಣ ಮತ್ತು ಸೇವಾ ಪರಿಸ್ಥಿತಿಗಳು;

- ಸ್ವಾಯತ್ತತೆ, ಉತ್ತಮ ಆಡಳಿತ ಮತ್ತು ಸಬಲೀಕರಣದ ಮೂಲಕ ನಾವೀನ್ಯತೆ ಮತ್ತು ಸೃಜನಶೀಲ ಆಲೋಚನೆಗಳನ್ನು ಉತ್ತೇಜಿಸುತ್ತಾ, ಲೆಕ್ಕಪರಿಶೋಧನೆ ಮತ್ತು ಪಾರದರ್ಶಕತೆಯ ಮೂಲಕ ಶೈಕ್ಷಣಿಕ ವ್ಯವಸ್ಥೆಯ ಸಮಗ್ರತೆ, ಪಾರದರ್ಶಕತೆ ಮತ್ತು ಸಂಪನ್ಮೂಲ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು 'ಹಗುರಾದ ಆದರೆ ಬಿಗಿಯಾದ' ನಿಯಂತ್ರಕ ಚೌಕಟ್ಟು;

- ಅತ್ಯುತ್ತಮ ಶಿಕ್ಷಣ ಮತ್ತು ಅಭಿವೃದ್ಧಿಗೆ ಪೂರಕ ಅಗತ್ಯವಾಗಿ ಅತ್ಯುತ್ತಮ ಸಂಶೋಧನೆ;

- ಶೈಕ್ಷಣಿಕ ತಜ್ಞರಿಂದ ನಿರಂತರ ಸಂಶೋಧನೆ ಮತ್ತು ನಿಯಮಿತ ಮೌಲ್ಯಮಾಪನದ ಆಧಾರದ ಮೇಲೆ ಪ್ರಗತಿಯ ನಿರಂತರ ವಿಮರ್ಶೆ;



Executive Director
Karnataka State Higher Education Council

- ಭಾರತದ ಶ್ರೀಮಂತ, ವೈವಿಧ್ಯಮಯ, ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಿ, ಜ್ಞಾನ ವ್ಯವಸ್ಥೆಗಳು ಮತ್ತು ಸಂಪ್ರದಾಯಗಳ ಬಗ್ಗೆ ಹೆಮ್ಮೆ;
- **ಶಿಕ್ಷಣವು ಸಾರ್ವಜನಿಕ ಸೇವೆಯಾಗಿದೆ;** ಗುಣಮಟ್ಟದ ಶಿಕ್ಷಣವನ್ನು ಪಡೆಯುವುದು ಪ್ರತಿ ಮಗುವಿನ ಮೂಲಭೂತ ಹಕ್ಕು ಎಂದು ಪರಿಗಣಿಸಬೇಕು;
- ಸುಭದ್ರವಾದ ಮತ್ತು ಚಲನಶೀಲ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗಣನೀಯ ಹೂಡಿಕೆ ಮತ್ತು ಸಾರ್ವಜನಿಕ ಸೇವೆಯ ನೈಜ ಉದ್ದೇಶ ಹಾಗೂ ಸೇವಾ ಮನೋಭಾವವುಳ್ಳ ಖಾಸಗಿ ವ್ಯಕ್ತಿ/ಸಂಸ್ಥೆಗಳ ಮತ್ತು ಸಮುದಾಯದ ಭಾಗವಹಿಸುವಿಕೆಗೆ ಪ್ರೋತ್ಸಾಹ.

## ರಾಷ್ಟ್ರೀಯ ಶಿಕ್ಷಣ ನೀತಿ – ಶಾಲಾ ಶಿಕ್ಷಣ

- ಉತ್ತಮ ಗುಣಮಟ್ಟದ ಆರಂಭಿಕ **ಬಾಲ್ಯದ ಆರೈಕೆ ಮತ್ತು ಶಿಕ್ಷಣ** (ECCE)
- ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕ ಮೂಲಭೂತ **ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು** ಪಡೆಯುವುದರ ಕುರಿತು ವಿವಿಧ ಹಂತಗಳಿಗೆ ಸಂಬಂಧಿಸಿದಂತೆ 2025 ರ ವೇಳೆಗೆ ಸಾಧಿಸಬೇಕಾದ ಗುರಿಗಳನ್ನು ಗುರುತಿಸುವುದು.
- ಎಲ್ಲಾ ಹಂತಗಳಲ್ಲಿ **ಶಿಕ್ಷಣಕ್ಕೆ ಸಾರ್ವತ್ರಿಕ ಪ್ರವೇಶ ಕಲ್ಪಿಸುವಿಕೆ** – ಪೂರ್ವ ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದವರೆಗೆ 2030ರ ವೇಳೆಗೆ 100% ಒಟ್ಟು ದಾಖಲಾತಿ ಅನುಪಾತವನ್ನು ಸಾಧಿಸುವುದು.
- ಶಾಲೆಗಳಲ್ಲಿ **ಪಠ್ಯಕ್ರಮ ಮತ್ತು ಬೋಧನಾ ಶಾಸ್ತ್ರದ ಪುನರ್ ರಚನೆ:** ಕಲಿಕೆಯು ಸಮಗ್ರ, ಸಂಯೋಜಿತ, ಆನಂದದಾಯಕ ಮತ್ತು ತೊಡಗಿಸಿಕೊಳ್ಳುವ ರೀತಿ ಇರಬೇಕು (ಹೊಸ 5+3+3+4 ವಿನ್ಯಾಸದಂತೆ)

## ರಾಷ್ಟ್ರೀಯ ಶಿಕ್ಷಣ ನೀತಿ – ಉನ್ನತ ಶಿಕ್ಷಣ

- ಉನ್ನತ ಶಿಕ್ಷಣ ವ್ಯವಸ್ಥೆಯ **ಸಂಪೂರ್ಣ ಕೂಲಂಕಷ ಪರೀಕ್ಷೆ ಮತ್ತು ಪುನಶ್ಚೇತನ**
- **ಪ್ರತಿ ಜಿಲ್ಲೆಯ ಒಳಗೆ** ಕನಿಷ್ಠ ಒಂದು ಅಥವಾ ಪ್ರತಿ ಜಿಲ್ಲೆಯ ಹತ್ತಿರ ದೊಡ್ಡದಾದ, ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಸ್ಥಾಪನೆ.
- **ಹೊಸ ಸ್ವರೂಪ – ಮೂರು ವಿಧದ ಉನ್ನತ ಶಿಕ್ಷಣ ಸಂಸ್ಥೆಗಳು**
  - **ಸಂಶೋಧನಾ ಕೇಂದ್ರಿತ ವಿಶ್ವವಿದ್ಯಾಲಯಗಳು**
  - **ತೀವ್ರ ಬೋಧನೆಯ ವಿಶ್ವವಿದ್ಯಾಲಯಗಳು**
  - **ಸ್ವಾಯತ್ತ ಪದವಿ ನೀಡುವ ಕಾಲೇಜುಗಳು**
- ವೃತ್ತಿಪರ ಶಿಕ್ಷಣವನ್ನು ಒಳಗೊಂಡಂತೆ 2018 ರಲ್ಲಿ ಶೇ.26.3 ರಷ್ಟಿದ್ದ ಉನ್ನತ ಶಿಕ್ಷಣದ ಒಟ್ಟು ದಾಖಲಾತಿ ಪ್ರಮಾಣವನ್ನು 2035 ರ ವೇಳೆಗೆ ಶೇ.50 ಕ್ಕೇರಿಸುವುದು.



Executive Director
arnataka State Higher Education Council

- ಬಹುಶಿಸ್ತೀಯ ಪದವಿಪೂರ್ವ ಶಿಕ್ಷಣ
- ಬೋಧಕವರ್ಗ ಮತ್ತು ಸಾಂಸ್ಥಿಕ ಸ್ವಾಯತ್ತತೆ
- ಪಠ್ಯಕ್ರಮ, ಬೋಧನಾ, ಮೌಲ್ಯಮಾಪನ ಮತ್ತು ವಿದ್ಯಾರ್ಥಿ ಬೆಂಬಲವನ್ನು ಪರಿಷ್ಕರಿಸುವುದು
- ಬೋಧಕವರ್ಗ ಮತ್ತು ಸಾಂಸ್ಥಿಕ ನಾಯಕತ್ವದ ಸ್ಥಾನಗಳ ಸಮಗ್ರತೆ
- ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆಯಿರುವ ಹೆಚ್ಚಿನ ಅರ್ಹತೆಯಿರುವ ಮಂಡಳಿಗಳಿಂದ ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತ.
- ನ್ಯಾಷನಲ್ ರಿಸರ್ಚ್ ಫೌಂಡೇಶನ್ ಇದು ಪೀರ್-ರಿವ್ಯೂಡ್ ಸಂಶೋಧನೆಗಳಲ್ಲಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಪ್ರಾಧ್ಯಾಪಕರು ಪಾಲ್ಗೊಳ್ಳಲು ನಿಧಿಯನ್ನು ಒದಗಿಸುವುದು.
- "ಹಗುರವಾದ ಆದರೆ ಬಿಗಿಯಾದ" ನಿಯಂತ್ರಣ
    - HECI ಅಡಿಯಲ್ಲಿ 4 ಸಂಸ್ಥೆಗಳ ಸ್ಥಾಪನೆ - NHERC, NAC, HEGC ಮತ್ತು GEC.
- ಕಲ್ಪನಾತ್ಮಕ ಮತ್ತು ಹೊಂದಿಕೊಳ್ಳುವ ಪಠ್ಯಕ್ರಮ ಸ್ವರೂಪಗಳಿಗೆ ಉತ್ತೇಜನ.
- ಬಹು ಹಂತದ ಪ್ರವೇಶ ಮತ್ತು ಬಹು ಹಂತದ ನಿರ್ಗಮನ – ಪ್ರಸ್ತುತ ಪ್ರಚಲಿತದಲ್ಲಿರುವ ಕಠಿಣ ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಜೀವನಪರ್ಯಂತ ಕಲಿಕೆಗೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವುದು;
- ವೃತ್ತಿಪರ ಮತ್ತು ಶಿಕ್ಷಕರ ಶಿಕ್ಷಣವನ್ನು ಮರುರೂಪಿಸುವುದು

**ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆ**

- ಶಾಸಕಾಂಗ ಮಧ್ಯಸ್ಥಿಕೆಗಳ ಅಗತ್ಯವಿದೆ
    - **ಕರ್ನಾಟಕ ಶಿಕ್ಷಣ ಆಯೋಗದ ಸ್ಥಾಪನೆ– ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ**
    - **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸ್ಥಾಪನೆ (KSHEC)**
    - ನಿಯಂತ್ರಣ, ಧನಸಹಾಯ, ಸಂಶೋಧನೆಗಾಗಿ ಮತ್ತು ಅವಿಷ್ಕಾರಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಮಂಡಳಿಗಳ ಸ್ಥಾಪನೆ
        - **ಕರ್ನಾಟಕ ಉನ್ನತ ಶಿಕ್ಷಣ ನಿಯಂತ್ರಣ ಮಂಡಳಿ (KHERC)**
        - **ಕರ್ನಾಟಕ ಉನ್ನತ ಶಿಕ್ಷಣ ಅನುದಾನ ಮಂಡಳಿ (KHEGC)**
        - **ಕರ್ನಾಟಕ ಸಂಶೋಧನೆ ಮತ್ತು ನಾವೀನ್ಯತೆ ಮಂಡಳಿ (KRIC)**



Executive Director
Karnataka State Higher Education Council

- ➢ ಹೊಸ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಂಸ್ಥೆಗಳ ಕಾಯಿದೆಯನ್ನು ಜಾರಿಗೆ ತರುವುದು – ಡಾ.ವಾಸುದೇವ ಅತ್ರೆ ಸಮಿತಿ
- ➢ **ಬೋರ್ಡ್ ಆಫ್** ಗವರ್ನರ್‌ಗಳ ರಚನೆ ಮತ್ತು ಎಲ್ಲಾ **ಉನ್ನತ ಶಿಕ್ಷಣದಲ್ಲಿ ಸಾಂಸ್ಥಿಕ ಅಭಿವೃದ್ಧಿ ಯೋಜನೆ (IDP) ಗಳನ್ನು ರೂಪಿಸುವುದು**

- **ಶೈಕ್ಷಣಿಕ/ಆಡಳಿತಾತ್ಮಕ ಮಧ್ಯಸ್ಥಿಕೆಗಳ ಅಗತ್ಯತೆ**
  - ➢ ಸಂಯೋಜಿತ ಕಾಲೇಜುಗಳಿಗೆ **ಶ್ರೇಣಿಕೃತ ಸ್ವಾಯತ್ತತೆ**
  - ➢ ಸಮಗ್ರ ಸ್ನಾತಕ ಕಾರ್ಯಕ್ರಮದ ಪರಿವರ್ತನೆಗಾಗಿ **ಪಠ್ಯಕ್ರಮದ ಚೌಕಟ್ಟಿನ** ರಚನೆ
  - ➢ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ **ಅಧ್ಯಾಪಕರ ಅಭಿವೃದ್ಧಿ**
  - ➢ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ **ಸಮಾನತೆ ಮತ್ತು ಒಳಗೊಳ್ಳುವಿಕೆ** ತರಲು ಮಧ್ಯಸ್ಥಿಕೆ
  - ➢ **ವಿಶೇಷ ಶಿಕ್ಷಣ ವಲಯಗಳ** ಸ್ಥಾಪನೆ
  - ➢ ಶಿಕ್ಷಕ–ವಿದ್ಯಾರ್ಥಿ ಅನುಪಾತದ ಪ್ರಕಾರ ಸಾಕಷ್ಟು **ಮಾನವ ಸಂಪನ್ಮೂಲದ** ಅಭಿವೃದ್ಧಿ

- ಹಣಕಾಸಿನ ಮಧ್ಯಸ್ಥಿಕೆಗಳ ಅಗತ್ಯತೆ
  - ➢ ಕರ್ನಾಟಕವು ಕೇವಲ 1.8% ರಷ್ಟು **GSDP ಯನ್ನು ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದೆ (ಕೇವಲ 0.26% ಉನ್ನತ ಶಿಕ್ಷಣದ ಮೇಲೆ)**
  - ➢ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ಹೂಡಿಕೆಯಲ್ಲಿ ಗಣನೀಯ ಏರಿಕೆಯ ಅಗತ್ಯತೆಯಿದೆ– ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷವಾಗಿ **ಮೂಲಸೌಕರ್ಯ ಮತ್ತು ಸಲಕರಣೆಗಳ ಅಂತರವನ್ನು** ನಿವಾರಿಸುವ ಅಗತ್ಯತೆಯಿದೆ.
  - ➢ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ **ಅನುಷ್ಠಾನ ನಿಧಿಯ** ಸ್ಥಾಪನೆ.

## ರಾಷ್ಟ್ರೀಯ ಶಿಕ್ಷಣ ನೀತಿ–2020: ಕರ್ನಾಟಕ

- **29 ಜುಲೈ, 2020** ರಂದು ಕೇಂದ್ರ ಸಚಿವ ಸಂಪುಟದಿಂದ ಅನುಮೋದಿಸಲ್ಪಟ್ಟಿದೆ.
- ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತ ಕಾರ್ಯಪಡೆಯನ್ನು ರಚಿಸಿದ **ಮೊದಲ ರಾಜ್ಯ ಕರ್ನಾಟಕ – ಮಾರ್ಚ್ 2020**

- ಮೂರು ಉಪಸಮಿತಿಗಳನ್ನು ರಚಿಸಲಾಯಿತು
  - ಶಾಲಾ ಶಿಕ್ಷಣ
  - ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಸುಧಾರಣೆ
  - ಉನ್ನತ ಶಿಕ್ಷಣದಲ್ಲಿ ಆಡಳಿತ ಮತ್ತು ನಿಯಂತ್ರಣ

- ಸನ್ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು, ಸನ್ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂತ್ರಿಗಳು ಕಾರ್ಯಪಡೆಯ ಸದಸ್ಯರೊಂದಿಗೆ ಹಲವು ಸುತ್ತಿನ ಚರ್ಚೆಗಳನ್ನು ನಡೆಸಿದ್ದಾರೆ.



Executive Director
Karnataka State Higher Education Council

- **ಕಾರ್ಯಪಡೆಯ ವರದಿ ಸಲ್ಲಿಕೆ – ನವೆಂಬರ್ 2020**
- **ಕರ್ನಾಟಕದ ಸಚಿವ ಸಂಪುಟದಿಂದ** ಕಾರ್ಯಪಡೆಯ ವರದಿಯ ಅಂಗೀಕಾರ– **ಡಿಸೆಂಬರ್ 2020**
- ಸನ್ಮಾನ್ಯ **ಉನ್ನತ ಶಿಕ್ಷಣ ಮಂತ್ರಿಗಳು** ಸಾರ್ವಜನಿಕ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳ ಕುಲಪತಿಗಳೊಂದಿಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಹಂತಗಳನ್ನು ಕುರಿತು ಹಲವು ಸಭೆಗಳನ್ನು ನಡೆಸಿದ್ದಾರೆ.
- ವಿವಿಧ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವಿವಿಧ **ಕಾರ್ಯಾಗಾರಗಳು, ಚರ್ಚೆಗಳು ಮತ್ತು ಸಮ್ಮೇಳನಗಳನ್ನು** ನಡೆಸಲಾಗಿದೆ.
- **ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತಿನಲ್ಲಿಯೂ** ಸನ್ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಾದ ಮಾಹಿತಿಗಳನ್ನು ನೀಡಿದ್ದಾರೆ.
- ಶೈಕ್ಷಣಿಕ ವರ್ಷ 2021–22 ರಿಂದ **ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಅನುಷ್ಠಾನವನ್ನು ಪ್ರಾರಂಭಿಸಿದ ಮೊದಲ ರಾಜ್ಯ ಕರ್ನಾಟಕವಾಗಿದೆ.**
- **ಅನುಷ್ಠಾನವನ್ನು ಕುರಿತ ಸರ್ಕಾರಿ ಆದೇಶವನ್ನು 7 ಆಗಸ್ಟ್, 2021** ರಂದು ಹೊರಡಿಸಲಾಗಿದೆ.
- ನಿಕಾಯವಾರು **ಮಾದರಿ ಕಾರ್ಯಕ್ರಮ ಸ್ವರೂಪವನ್ನು (Model Program Structure)** ರೂಪಿಸಲಾಗಿದೆ.
- **ಮಾದರಿ ಪಠ್ಯಕ್ರಮ** ವಿನ್ಯಾಸ (**Model Curriculim Design**) ರೂಪಿಸಲು ವಿಷಯವಾರು (Subject wise) ಸಮಿತಿಗಳನ್ನು ರಚಿಸಲಾಗಿದೆ.
- **23 ಆಗಸ್ಟ್, 2021** ರಿಂದ ಉನ್ನತ ಶಿಕ್ಷಣಕ್ಕೆ ಪ್ರವೇಶಾತಿ ಪ್ರಾರಂಭಿಸಲಾಗಿದೆ.
- **1 ಅಕ್ಟೋಬರ್, 2021** ರಿಂದ **2021–22**ನೇ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ.

## ರಾಷ್ಟ್ರೀಯ ಶಿಕ್ಷಣ ನೀತಿ – ಬಹುಶಿಸ್ತೀಯ ಕಾರ್ಯಕ್ರಮ ಸ್ವರೂಪ

- ಪದವಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯವಿದೆ.
  - 2 ಮುಖ್ಯ ಶಿಸ್ತೀಯ ವಿಷಯಗಳು
  - 1 ಮುಕ್ತ ವಿಷಯ ಯಾವುದೇ ನಿಕಾಯದಿಂದ (ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರತಿ ವರ್ಷ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು)
  - ಕನ್ನಡದೊಂದಿಗೆ ಇನ್ನೊಂದು ಭಾಷೆ
  - ಮುಖ್ಯ ವಿಷಯಕ್ಕೆ ಸಂಬಂಧಿಸಿದ ಆಯ್ಕೆ ಪತ್ರಿಕೆಗಳು (ಮೂರನೇ ವರ್ಷದಲ್ಲಿ)
- **ಕೌಶಲ್ಯ** ಮತ್ತು **ಸಾಮರ್ಥ್ಯ ಅಭಿವೃದ್ಧಿ ಕೋರ್ಸ್‌ಗಳು**
- ಆರೋಗ್ಯ ಮತ್ತು ಸ್ವಾಸ್ಥ್ಯ



Executive Director
Karnataka State Higher Education Council

- ಬಹು ಹಂತದ ಪ್ರವೇಶ ಮತ್ತು ಬಹು ಹಂತದ ನಿರ್ಗಮನ
    - 1 ನೇ ವರ್ಷ – ಸರ್ಟಿಫಿಕೇಟ್
    - 2ನೇ ವರ್ಷ – ಡಿಪ್ಲೋಮಾ
    - 3ನೇ ವರ್ಷ – ಪದವಿ
- ವಿಶ್ವವಿದ್ಯಾಲಯ/ ಕಾಲೇಜಿನಲ್ಲಿ ಶಿಕ್ಷಣವನ್ನು ಅದೇ ಹಂತದಿಂದ ಶಿಕ್ಷಣವನ್ನು ಮುಂದುವರೆಸಲು ಅವಕಾಶ.
- ನಾಲ್ಕನೇ ವರ್ಷ (ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟಿದ್ದು) ಆನರ್ಸ್ ಪದವಿ (ಸಂಶೋಧನೆ/ಇಂಟರ್ನ್‌ಶಿಪ್/ಉದ್ಯಮಶೀಲತೆ)
- ಸ್ನಾತಕೋತ್ತರ ಪದವಿ – 1 ವರ್ಷ/ 2 ವರ್ಷ
- ಸಂಶೋಧನೆ ಆಯಾಮದೊಂದಿಗೆ ಆನರ್ಸ್ ಪದವಿಯನ್ನು ಗಳಿಸಿದವರು ನೇರವಾಗಿ ಪಿಹೆಚ್.ಡಿ ಪದವಿಗೆ ಪ್ರವೇಶಿಸಬಹುದು.
- ಅಧಿಕೃತ ಆನ್ ಲೈನ್ ಕೋರ್ಸ್ ಗಳ ಮೂಲಕ 40% ರವರೆಗೆ ಕ್ರೆಡಿಟ್‌ಗಳನ್ನು ಪಡೆಯಲು ಅವಕಾಶ.
- ನ್ಯಾಶನಲ್ ಸ್ಕಿಲ್ಸ್ ಕ್ವಾಲಿಫಿಕೇಶನ್ ಫ್ರೇಂವರ್ಕ್ (NSQF) ಗೆ ಅನುಸಾರವಾಗಿದೆ
    * 1 ನೇ ವರ್ಷ –ಸ್ತರ 5
    * 2 ನೇ ವರ್ಷ –ಸ್ತರ 6
    * 3 ನೇ ವರ್ಷ –ಸ್ತರ 7
    * ಆನರ್ಸ್/ಪಿಜಿ ಡಿಪ್ಲೊಮಾ –ಸ್ತರ 8
    * ಸ್ನಾತಕೋತ್ತರ – ಸ್ತರ 9

## ರಾಷ್ಟ್ರೀಯ ಶಿಕ್ಷಣ ನೀತಿ 2020 – ತಂತ್ರಜ್ಞಾನದ ಅಳವಡಿಕೆ

- **ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) – ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾದ ವೇದಿಕೆಯಾಗಿದೆ**
- **ಡಿಜಿಟಲ್ ಕಲಿಕೆ**
    - ಕರ್ನಾಟಕ ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ (LMS) – ಕರ್ನಾಟಕ ಸಮಗ್ರ LMS ಅನ್ನು ಅನುಷ್ಠಾನಗೊಳಿಸಿರುವ ಪ್ರಥಮ ರಾಜ್ಯ ಕರ್ನಾಟಕವಾಗಿದೆ.
    - ಸ್ಮಾರ್ಟ್ ತರಗತಿಗಳು– ಇಂಟರ್ನೆಟ್ ವ್ಯವಸ್ಥೆಯನ್ನು ಒಳಗೊಂಡಿದೆ.
    - ಸಾಧನಗಳು– ಟ್ಯಾಬ್ಲೆಟ್ ಪಿ.ಸಿ.ಗಳು



Executive Director
Karnataka State Higher Education Council

## ರಾಷ್ಟ್ರೀಯ ಶಿಕ್ಷಣ ನೀತಿ 2020 – ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣ

- ತಾಂತ್ರಿಕ ಶಿಕ್ಷಣ ಇಲಾಖೆಯು ಅಮೆರಿಕಾದ **Montgomery County Community College** (MCCC) ಮತ್ತು **Harrisburg Area Community College** (HACC) ಗಳ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ
- **ಜಂಟಿ ಕಾರ್ಯಕ್ರಮಗಳು (Twinning Programs)**
  * ಸೈಬರ್ ಸೆಕ್ಯೂರಿಟಿ
  * ಪ್ರವಾಸ ಮತ್ತು ಪ್ರವಾಸೋದ್ಯಮ
- **ಡಿಪ್ಲೊಮಾ ಮತ್ತು ಅಸೋಸಿಯೇಟ್ ಡಿಗ್ರಿಗಳನ್ನು** ನೀಡಲಾಗುತ್ತದೆ
- ಡಿಪ್ಲೊಮಾ ಸ್ತರದಲ್ಲಿ **ಜಂಟಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿರುವ ಪ್ರಥಮ ರಾಜ್ಯ ಕರ್ನಾಟಕವಾಗಿದೆ.**
- ಮೂರು ವರ್ಷಗಳಿಗೆ ರೂ.16 ಕೋಟಿಗಳ ಅಗತ್ಯತೆ ಇದೆ (1ನೇ ವರ್ಷ ರೂ.1.5 ಕೋಟಿ; 2ನೇ ವರ್ಷ ರೂ.2.5 ಕೋಟಿ; 3ನೇ ವರ್ಷ ರೂ.12 ಕೋಟಿ).

## ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾಗೃತಿ ಅಭಿಯಾನ

- **ರಾಷ್ಟ್ರೀಯ ಶಿಕ್ಷಣ ನೀತಿ ಸಹಾಯವಾಣಿ**
  - ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ರಾಜ್ಯಮಟ್ಟದ ಸಹಾಯವಾಣಿ
  - ವಿಶ್ವವಿದ್ಯಾಲಯ ಮಟ್ಟದ ಸಹಾಯವಾಣಿಗಳು
  - ಕಾಲೇಜು ಮಟ್ಟದ ಸಹಾಯ ಕೇಂದ್ರಗಳು
- **ಜಾಗೃತಿ ಕಾರ್ಯಕ್ರಮಗಳು**
  - **ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡದಲ್ಲಿ** ಎಲ್ಲ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಅಧ್ಯಾಪಕರಿಗೆ ಒಂದು ದಿನದ **ಕಾರ್ಯಾಗಾರದ** ಆಯೋಜನೆ.
  - ಪ್ರತಿಯೊಂದು ವಿಶ್ವವಿದ್ಯಾಲಯವೂ, ಸಂಯೋಜಿತ **ಕಾಲೇಜುಗಳ ಅಧ್ಯಾಪಕರು,** ಆಡಳಿತ ಮಂಡಳಿಗಳಿಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ **ಕಾರ್ಯಾಗಾರಗಳನ್ನು** ಆಯೋಜಿಸತಕ್ಕದ್ದು (ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಕಾರ್ಯಾಗಾರಗಳಿಗೆ ಆಹ್ವಾನಿಸತಕ್ಕದ್ದು).
  - ಎಲ್ಲ ಪಾಲುದಾರರಿಗಾಗಿ ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ **ಸಮ್ಮೇಳನಗಳನ್ನು** ಆಯೋಜಿಸತಕ್ಕದ್ದು.
  - ಕಾಲೇಜುಮಟ್ಟದಲ್ಲಿ ವಾರಕ್ಕೊಮ್ಮೆ ಭಾವೀ ವಿದ್ಯಾರ್ಥಿಗಳು ಹಾಗೂ ಪೋಷಕರಿಗಾಗಿ **ಒರಿಯೆಂಟೇಷನ್** ಕಾರ್ಯಕ್ರಮಗಳ ಆಯೋಜನೆ.



Executive Director
Karnataka State Higher Education Council

- ➢ ಪ್ರತಿಯೊಂದು ವಿಶ್ವವಿದ್ಯಾಲಯವೂ ರಾಷ್ಟ್ರೀಯ ಶಿಕ್ಷಣ ನೀತಿ–2020 **ಜಾಗೃತಿ ಕಾರ್ಯಕ್ರಮದ ಸಾಮಗ್ರಿಗಳನ್ನು** ಸಿದ್ಧಪಡಿಸಿ (ಪೋಸ್ಟರ್‌ಗಳು, ಬ್ಯಾನರ್‌ಗಳು, ಕರಪತ್ರಗಳು ಇತ್ಯಾದಿ) ಎಲ್ಲ ಸಂಯೋಜಿತ ಕಾಲೇಜುಗಳಿಗೆ ಕಳುಹಿಸತಕ್ಕದ್ದು.
- ➢ ಗಣ್ಯ ವ್ಯಕ್ತಿಗಳಿಂದ **ಯೂಟ್ಯೂಬ್ ನೇರ ಕಾರ್ಯಕ್ರಮ, ಫೋನ್ ಇನ್ ಕಾರ್ಯಕ್ರಮಗಳು, ಭಾಷಣಗಳ** ಆಯೋಜನೆ.
    - ○ ವಿಶ್ವವಿದ್ಯಾಲಯದ ಮಟ್ಟದಲ್ಲಿ ಕುಲಪತಿಗಳು, ವಿವಿಧ ನಿಕಾಯಗಳ ಪ್ರಾಧ್ಯಾಪಕರು ಮುಂತಾದವರಿಂದ.
    - ○ ರಾಜ್ಯಮಟ್ಟದಲ್ಲಿ – ಮಾನ್ಯ ಉನ್ನತ ಶಿಕ್ಷಣ ಸಚಿವರು, ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಧಿಕಾರಿಗಳು, ಆಯುಕ್ತರು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಮುಂತಾದವರಿಂದ.

- ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ತಮ್ಮ ಜಾಲತಾಣಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದ ದಾಖಲೆಗಳನ್ನು/ ಮಾರ್ಗಸೂಚಿಗಳನ್ನು ಪ್ರಕಟಿಸುವುದು.
- ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಮತ್ತು ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನವನ್ನು ಕುರಿತು 'ರಾಷ್ಟ್ರೀಯ ಶಿಕ್ಷಣ ನೀತಿ ಕರ್ನಾಟಕ' ಎಂಬ ವಿಶಿಷ್ಟ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸುವುದು.
- **'ರಾಷ್ಟ್ರೀಯ ಶಿಕ್ಷಣ ನೀತಿ ಕರ್ನಾಟಕ'**ದ ಹೆಸರಿನಲ್ಲಿ ವಿಶಿಷ್ಟವಾದ ಸಾಮಾಜಿಕ ಮಾಧ್ಯಮ ಹ್ಯಾಂಡಲ್ ಗಳನ್ನು (ಟ್ವಿಟ್ಟರ್, ಫೇಸ್ ಬುಕ್ ಇತ್ಯಾದಿ) ಸೃಜಿಸುವುದು.
- ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ (ಟಿವಿ ಮತ್ತು ರೇಡಿಯೋ ಚಾನೆಲ್‌ಗಳು).
- ಪ್ರಭಾವಿ ವ್ಯಕ್ತಿಗಳಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಕುರಿತಾದ ವಿಡಿಯೋಗಳು.

### ರಾಷ್ಟ್ರೀಯ ಶಿಕ್ಷಣ ನೀತಿ–2020 ಕ್ಕೆ ಚಾಲನೆ – 23 ನೇ ಆಗಸ್ಟ್ 2021

- **'ರಾಷ್ಟ್ರೀಯ ಶಿಕ್ಷಣ ನೀತಿ–2020 ಕರ್ನಾಟಕ' ವೆಬ್ ಪೋರ್ಟಲ್‌ಗೆ ಚಾಲನೆ ನೀಡಲಾಗಿದೆ.**
- **2021–22ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರವೇಶ ಪ್ರಾರಂಭಿಸಲಾಗಿದೆ.**
- **ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) ಯ Admissions Module ಮೂಲಕ 23 ಆಗಸ್ಟ್, 2021 ರಂದು ಉನ್ನತ ಶಿಕ್ಷಣದ ಪ್ರವೇಶಾತಿಗೆ ಚಾಲನೆ ನೀಡಲಾಗಿದೆ.**
- **ಡಿಪ್ಲೊಮಾ ಹಂತದಲ್ಲಿ ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣಕ್ಕೆ ಚಾಲನೆ ನೀಡಲಾಗಿದೆ.**
- ಕರಡು **'ರಾಷ್ಟ್ರೀಯ ಶಿಕ್ಷಣ ನೀತಿ ರಚನಾ ಸಮಿತಿಯ** ಸದಸ್ಯರಾದ ಡಾ. ಕೆ. ಕಸ್ತೂರಿರಂಗನ್, ಡಾ. ಟಿ. ವಿ. ಕಟ್ಟೀಮನಿ, ಪ್ರೊ. ಎಂ. ಕೆ. ಶ್ರೀಧರ್ ಮತ್ತು ಪ್ರೊ. ಅನುರಾಗ್ ಬೆಹರ್ ಅವರನ್ನು ಸನ್ಮಾನಿಸಲಾಯಿತು.

Executive Director
Karnataka State Higher Education Council

ಅನುಬಂಧ - 3

## NEP Milestones

| Sl.no | Date | Description |
|---|---|---|
| 1 | ED 260 UNE 2019 dated: 04.03.2020 | ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಪರಿಶೀಲಿಸಿ, ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ.ಎಸ್. ವಿ.ರಂಗನಾಥ್, ಐ.ಎ.ಎಸ್ (ನಿ) ರವರ ಅಧ್ಯಕ್ಷತೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ: ಇಎಇ 260 ಯುಎನ್ಇ 2019 ದಿನಾಂಕ: 04.03.2020 ರಂದು ಕಾರ್ಯಪಡೆಯನ್ನು ರಚಿಸಲಾಯಿತು. |
| | 06-03-2020 | ದಿನಾಂಕ:06.03.2020 ರಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) ಅವರ ಅಧ್ಯಕ್ಷತೆಯಲ್ಲಿ NEP ಟಾಸ್ಕ್ ಫೋರ್ಸ್ ಸಮಿತಿ ಸದಸ್ಯರು ಮತ್ತು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ |
| 2 | 11.05.2020 (No. KSHEC/93/NEP/Sub Committee-1/2019-20/262 /11.05.2020) | ದಿನಾಂಕ: 11.05.2020 ರಂದು ಉಪಸಮಿತಿಗಳ ರಚನೆ: (ಎರಡು ಉಪಸಮಿತಿಗಳು)<br>1. ಉನ್ನತ ಶಿಕ್ಷಣ ಪಠ್ಯಕ್ರಮ ಸುಧಾರಣೆ<br>2. ಉನ್ನತ ಶಿಕ್ಷಣದಲ್ಲಿ ಆಡಳಿತ ಮತ್ತು ನಿಯಂತ್ರ |
| 3 | 07.11.2020 | ದಿನಾಂಕ:07.11.2020 ರಂದು ಸನ್ಮಾನ್ಯ ಉಪಮುಖ್ಯಮಂತ್ರಿ (ಉನ್ನತ ಶಿಕ್ಷಣ) ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಸಚಿವರಿಗೆ ಕಾರ್ಯಪಡೆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಂದ NEP ಕುರಿತು ಪ್ರಸ್ತುತಿ |
| 4 | 07.11.2020 | ದಿನಾಂಕ:07.11.2020 ರಂದು NEP ಕಾರ್ಯಪಡೆ ಸಮಿತಿಯು NEP ಕುರಿತು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. |
| 5 | 26.11.2020 | ದಿನಾಂಕ:26.11.2020 ರಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಸಚಿವರೊಂದಿಗೆ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ಟಾಸ್ಕ್ ಫೋರ್ಸ್ ಸಮಿತಿಯ NEP ವರದಿಯ ಪ್ರಸ್ತುತಿ |
| 6 | December, 2020 | ಡಿಸೆಂಬರ್-2020 ರಲ್ಲಿ NEP ಕಾರ್ಯಪಡೆ ಸಮಿತಿಯ ವರದಿಯನ್ನು ರಾಜ್ಯ ಸಚಿವ ಸಂಪುಟ ಸಭೆಯು ಅನುಮೋದಿಸಿದೆ. |



Executive Director
Karnataka State Higher Education Council

| | | |
|---|---|---|
| 7 | 17.12.2020<br>(ED 260 UNE 2019/17-12-20) | ಸರ್ಕಾರದ ಪತ್ರ ಸಂಖ್ಯೆ:ಇಡಿ 260 ಯುಎನ್ಇ 2019 ದಿನಾಂಕ:17.06.2021 ರಂದು ಆದೇಶ ಹೊರಡಿಸಿದೆ. |
| 8 | 19-06-2021<br>(ED 260 UNE 2019/19-6-21) | ದಿನಾಂಕ:19.06.2021 ರಂದು ಪಠ್ಯಕ್ರಮವನ್ನು ತಯಾರಿಸಲು Fculty ವಾರು ಪಠ್ಯಕ್ರಮದ ಚೌಕಟ್ಟಿನ ಸಮಿತಿಗಳನ್ನು ರಚಿಸಲಾಗಿದೆ<br>1. ಸಮಾಜ ವಿಜ್ಞಾನ<br>2. ಮಾನವಿಕಗಳು ( ಭಾಷೆ ಮತ್ತು ಭಾಷಾಶಾಸ್ತ್ರ)<br>3. ಫೈನ್ ಆರ್ಟ್ಸ್ ಮತ್ತು ವಿಷುಯಲ್ ಆರ್ಟ್ಸ್<br>4. ಭೌತಿಕ ಮತ್ತು ಗಣಿತ ವಿಜ್ಞಾನ<br>5. ರಾಸಾಯನಿಕ ಮತ್ತು ಜೈವಿಕ ವಿಜ್ಞಾನಗಳು<br>6. ಭೂ ವಿಜ್ಞಾನ<br>7. ವಾಣಿಜ್ಯ ಮತ್ತು ನಿರ್ವಹಣೆಯ Faculty<br>8. ಇಂಜಿನಿಯರಿಂಗ್ Faculty |
| 9 | | Development of model Curriculum Framework |
| 10 | Submitted to Vice-Chairman and copy to ACS (HE) | ಮಾದರಿ ಪಠ್ಯಕ್ರಮದ ಚೌಕಟ್ಟಿನ ವರದಿನ್ನು ಸರ್ಕಾರಕ್ಕೆ ಸಲ್ಲಿಸುವುದು. |
| 11 | 13-08-2021<br>(GO No.ED 260 UNE 2021 (P-1/13-8-21) | ಸರ್ಕಾರದ ಪತ್ರ ದಿನಾಂಕ:13.08.2021 ರಲ್ಲಿ ಕರಡು ಮಾದರಿ ಪಠ್ಯಕ್ರಮದ ವಿಷಯಗಳಿಗೆ ವಿಷಯವಾರು ತಜ್ಞರ ಸಮಿತಿಗಳ ರಚನೆ |
| 12 | 07-08-2021<br>(ED 260 UNE 2019/7.8.2021 | ಕರ್ನಾಟಕದಲ್ಲಿ NEP ಅನುಷ್ಠಾನದ ಕುರಿತು ಸರ್ಕಾರಿ ಆದೇಶ ಹೊರಡಿಸಲಾಗಿದೆ |
| 13 | 19.01.2021 | ಸನ್ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಅವರ ಅಧ್ಯಕ್ಷತೆಯಲ್ಲಿ NEP ಮತ್ತು ಅದರ ಆಶಯಗಳ ಕುರಿತು ಎಲ್ಲಾ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳಿಗೆ ಜಾಗೃತಿಕಾರ್ಯಕ್ರಮವನ್ನು ನಡೆಸಲಾಯಿತು. |
| 14 | | NEP ಅನುಷ್ಠಾನದ ಕುರಿತು MLC ಗಳಿಗೆ ಪ್ರಸ್ತುತಿ |
| 15 | 22.07.2021 | NEP ಕಾರ್ಯಪಡೆ ಸಮಿತಿಯ ವರದಿ ಉಪಕುಲಪತಿಗಳಿಗೆ ಪ್ರಸ್ತುತಿ |
| 16 | 13.01.2021 | NEP ಅನುಷ್ಠಾನದ ಕುರಿತು ಉನ್ನತ ಶಿಕ್ಷಣ ಇಲಾಖೆಯ ನೌಕರರಿಗೆ ಕಾರ್ಯಾಗಾರ |
| 17 | 16.07.2021 | NEP ಅನುಷ್ಠಾನದ ವಿಷಯಗಳ ಕುರಿತು ಬ್ರಿಟಿಷ್ ಕೌನ್ಸಿಲ್ ನೊಂದಿಗೆ ರೌಂಡ್‌ಟೇಬಲ್ ನೀತಿ ಸಂವಾದಗಳು |
| 18 | To be framed | I.ಪದವಿಪೂರ್ವ ಪಠ್ಯಕ್ರಮದಲ್ಲಿ ಉದ್ಯೋಗದ ಗುಣಲಕ್ಷಣಗಳು |
| 19 | 16.04.2021 | II. ಬಹುಶಿಸ್ತೀಯ ಪಠ್ಯಕ್ರಮ |

15

Executive Director
...Education Council

| | | |
|---|---|---|
| 20 | KSHEC ಸಮಿತಿಯಿಂದ ತೆಗೆದುಕೊಳ್ಳಬಹುದು | III. ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ನಾವೀನ್ಯತೆ ಸಂಸ್ಕೃತಿಯನ್ನು ನಿರ್ಮಿಸುವುದು |
| 21 | 09-08-2021 | ಸನ್ಮಾನ್ಯ ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) ಇವರ ಅಧ್ಯಕ್ಷತೆಯಲ್ಲಿ NEP ಅನುಷ್ಠಾನದ ಕುರಿತು ಎಲ್ಲಾ ಉಪಕುಲಪತಿಗಳು ಮತ್ತು ಕಾಲೇಜು ಪ್ರಾಂಶುಪಾರೊಂದಿಗೆ ಸಭೆ |
| 22 | 17-08-2021 | NEP ಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಮತ್ತು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಇಲಾಖೆಯ ಪರಿಶೀಲನಾ ಸಭೆ |
| 23 | 20-08-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯವು ನಡೆಸಿದ ಕಾರ್ಯಾಗಾರದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸುತ್ತೂರು ಸ್ವಾಮೀಜಿ, ಉನ್ನತ ಶಿಕ್ಷಣ ಸಚಿವರು ಮತ್ತು ಇವರ ತಜ್ಞರು ಉಪಸ್ಥಿತರಿದ್ದರು. |
| 24 | 21-08-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ನಡೆಸಿದ ಕಾರ್ಯಾಗಾರ. |
| 25 | 21-08-2021 | ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತಜ್ಞರು ಮತ್ತು ಶಿಕ್ಷಣ ತಜ್ಞರು ಮತ್ತು ಇತರರಿಗೆ NEP ಕುರಿತು ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಚರ್ಚೆ/ಸ್ಪಷ್ಟೀಕರಣ |
| 26 | 23-08-2021 | ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಿಂದ ಕರ್ನಾಟಕದಲ್ಲಿ NEP ಚಾಲನೆ. |
| 27 | 24-08-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗುಲ್ಬರ್ಗ ವಿಶ್ವವಿದ್ಯಾನಿಲಯದಿಂದ ಕಾರ್ಯಾಗಾರ. ಉನ್ನತ ಶಿಕ್ಷಣ ಸಚಿವರು ಕಾರ್ಯಾಗಾರವನ್ನು ಉದ್ಘಾಟಿಸಿದರು. |
| 28 | 27-08-2021 | ರಾಜ್ಯದಲ್ಲಿ NEP ಅನುಷ್ಠಾನದ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಪತ್ರಿಕಾಗೋಷ್ಠಿ |
| 29 | 30-08-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು ಇವರು ನಡೆಸಿದ ಕಾರ್ಯಾಗಾರ. ಉನ್ನತ ಶಿಕ್ಷಣ ಸಚಿವರು ಕಾರ್ಯಾಗಾರವನ್ನು ಉದ್ಘಾಟಿಸಿದರು |
| 30 | 02-09-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ವಿಧಾನ ಪರಿಷತ್ತಿನ ಗೌರವಾನ್ವಿತ ಸದಸ್ಯರೊಂದಿಗೆ ಸಭೆ ಮತ್ತು ಚರ್ಚೆ |



Executive Director

| | | |
|---|---|---|
| 31 | 03-09-2021 | NEP ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯ.ಬೆಂಗಳೂರು ಇವರು ನಡೆಸಿದ ಕಾರ್ಯಾಗಾರ ಉನ್ನತ ಶಿಕ್ಷಣ ಸಚಿವರು ಕಾರ್ಯಾಗಾರವನ್ನು ಉದ್ಘಾಟಿಸಿದರು |
| 32 | 31-08-2021<br>01.09.2021 | ಕರ್ನಾಟಕ ರಾಜ್ಯ ಡಾ॥ ಗಂಗೂಬಾಹಿ ಹಾನಗಲ್ ಸಂಗೀತ ನೃತ್ಯ ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ 31.08.2021 ಮತ್ತು 01.09.2021 ರಂದು ರಾಜ್ಯ ಮಟ್ಟದ ಕಾರ್ಯಗಾರವನ್ನು ಏರ್ಪಡಿಸಿತು.<br>ಈ ಕಾರ್ಯಗಾರದಲ್ಲಿ ಡಾ॥ಕೆ.ರಾಮಕೃಷ್ಣಯ್ಯ. ಡಾ॥ ಎಸ್. ಶ್ರೀಧರ್, ಡಾ॥ ಎಸ್. ಎನ್ ಸುಶೀಲ, ಪ್ರೊ.ಮೃತ್ಯುಂಜಯ ಅಗಡಿ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. |
| 33 | 21-06.2021 | ದಿನಾಂಕ:21.06.2021 ರಂದು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು ಏರ್ಪಡಿಸಿತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ.ಬಿ.ತಿಮ್ಮೇಗೌಡ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. |
| 34 | 11-01-2021 &<br>16-02-2021 | ಈ ದಿನಾಂಕಗಳಂದು ನೃಪತುಂಗ ವಿಶ್ವವಿದ್ಯಾನಿಲಯ ಮತ್ತು ಸರ್ಕಾರಿ ಕಲಾ ಕಾಲೇಜು ಹಾಗೂ ಭಾರತೀಯ ಶಿಕ್ಷಣ ಮಂಡಳಿ ಮತ್ತು ನೀತಿ ಆಯೋಗ ಇವರುಗಳ ಜಂಟಿ ಸಹಯೋಗದೊಂದಿಗೆ ಒಂದು ದಿನದ Faculty Orientation program ನ್ನು ವ್ಯವಸ್ಥೆಗೊಳಿಸಲಾಗಿತ್ತು. ಡಾ॥ ಪದ್ಮಾವತಿ ಮತ್ತು ಶ್ರೀ ಗೌರೀಶ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. |
| 35 | 26-08-2021 | ರಾಯಚೂರು ವಿಶ್ವವಿದ್ಯಾನಿಲಯ ಇವರು 26.08.2021 ರಂದು ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು NEP-2020 ಅನುಷ್ಠಾನದ ಬಗ್ಗೆ ಕಾರ್ಯಗಾರ ಏರ್ಪಡಿಸಿದ್ದು, ಪ್ರೊ.ಎಂ.ವಿಶ್ವನಾಥ್ ರಿಜಿಸ್ಟ್ರಾರ್ ರಾಯಚೂರು ವಿಶ್ವವಿದ್ಯಾನಿಲಯ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು |
| 36 | 09-02-2021 | ರಾಯಚೂರು ವಿಶ್ವವಿದ್ಯಾನಿಲಯವು NEP ಸಂಬಂಧಿಸಿದ Challenges and Solutions ಎಂಬ ವಿಷಯದ ಬಗ್ಗೆ ಕಾರ್ಯಾಗಾರ ಏರ್ಪಡಿಸಿದ್ದು, Dr. Raghavendra Fattepur, Director, CDC, ರಾಯಚೂರು ವಿಶ್ವವಿದ್ಯಾನಿಲಯ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |

17

Executive Director

| | | |
|---|---|---|
| 37 | 09-04-2021 | ರಾಯಚೂರು ವಿಶ್ವವಿದ್ಯಾನಿಲಯವು NEP ಕಾರ್ಯಾನುಷ್ಠಾನದ ಬಗ್ಗೆ ವಿಶ್ವವಿದ್ಯಾನಿಲಯ ಮಟ್ಟದ ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದು, ಪ್ರೊ.ಹರೀಶ್ ರಾಮಸ್ವಾಮಿ ಉಪಕುಲಪತಿಗಳು ರಾಯಚೂರು ವಿಶ್ವವಿದ್ಯಾನಿಲಯ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 38 | 26-02-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ರಾಷ್ಟ್ರೀಯ ಉನ್ನತ ಶಿಕ್ಷಣ ನೀತಿಯ ಕಾರ್ಯಾನುಷ್ಠಾನದಲ್ಲಿ ಬೋದಕ ವ್ಯಕ್ತಿಗಳ ಪಾತ್ರ, ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ವಿಷಯದ ಬಗ್ಗೆ ವಿಚಾರ ಗೋಷ್ಠಿಯನ್ನು ಏರ್ಪಡಿಸಿದ್ದು, ಪ್ರೊ.ವೈ.ಎಸ್.ಸಿದ್ದೇಗೌಡ ರವರು ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 39 | 07-09-2021 | ಮಂಗಳೂರು ವಿಶ್ವವಿದ್ಯಾನಿಲಯವು NEP-2020 ರ ಬಗ್ಗೆ ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ಡಾ॥ ರವಿ ಎಂ.ಎನ್. ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 40 | 14-09-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ONLINE ಕಾರ್ಯಗಾರವನ್ನು ಪದವಿ ಪೂರ್ವ ಬೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದರು. ಈ ಕಾರ್ಯಗಾರದಲ್ಲಿ ಡಾ॥ ರವಿ ಎಂ.ಎನ್. ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 41 | 21-09-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ Dimensions of National Education Policy-2020 ಈ ವಿಷಯದಡಿಯಲ್ಲಿ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ಕೃಷ್ಣಮೂರ್ತಿ ಎನ್.ಬಿ. ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 42 | 22-07-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ಪ್ರೊ.ಸುಕುಮಾರ ಗೌಡ ಮತ್ತು ಗೌರೀಶ ಜೋಷಿ ಇವರುಗಳು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 43 | 26-02-2021 & 29-06-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ONLINE & OFFLINE ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದು, ಈ ವಿಚಾರಗೋಷ್ಠಿಯಲ್ಲಿ ಡಾ॥ ಕರುಣಾಕರ್ ಕೋಟೆಗಾರ್ ಮತ್ತು ಪ್ರೊ.ವಿ.ತಿಮ್ಮೇಗೌಡ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದುರು. |
| 44 | 07-09-2021 & 09-09-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ಎರಡು ದಿನಗಳ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ |



Executive Director

| | | |
|---|---|---|
| | | ಕಾರ್ಯಗಾರದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 45 | 09-07-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಬೋಧಕರಿಗೆ ಜಾಗೃತಿ ಮೂಡಿಸುವ ಕಾರ್ಯಗಾರವನ್ನು ಏರ್ಪಡಿಸಲಾಗಿದ್ದು, ಶ್ರೀ. ಚಂದ್ರಹಾಸ ಕಾರ್ಕೇರ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 46 | 24-08-2021 | ಮಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ MBA ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ Academic ಮುಖ್ಯಸ್ಥರುಗಳಿಗೆ ಜಾಗೃತಿ ಮೂಡಿಸುವ ಬಗ್ಗೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕಾರ್ಯಗಾರ ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ಡಾ॥ಪುಟ್ಟಣ್ಣ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 47 | 25-05-2021,09-06-2021,11-06-2021 & 17-06-2021 | ತುಮಕೂರು ವಿಶ್ವವಿದ್ಯಾನಿಲಯವು ತಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ Board of Studies, Principals, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರುಗಳಿಗೆ NEP ಬಗ್ಗೆ ಅರಿವು ಮೂಡಿಸುವ ಅನೇಕ ಸಭೆಗಳನ್ನು ನಡೆಸಲಾಯಿತು. |
| 48 | 16-08-2021 | ತುಮಕೂರು ವಿಶ್ವವಿದ್ಯಾನಿಲಯವು ಪ್ರವೇಶಾತಿಗೆ ಸಂಬಂಧಿಸಿದಂತೆ Online workshop ನ್ನು ಏರ್ಪಡಿಸಲಾಗಿತ್ತು. |
| 49 | 17-08-2021 to 19-08-2021 | ತುಮಕೂರು ವಿಶ್ವವಿದ್ಯಾನಿಲಯವು NEP-2020 ಗೆ ಸಂಬಂಧಪಟ್ಟ ಸ್ವರೂಪ, ಉದ್ದೇಶ ಮತ್ತು ವಿಧಾನಗಳ ಬಗ್ಗೆ ವಿಶ್ವವಿದ್ಯಾನಿಲಯದ ಅಂಗೀಕೃತ ಕಾಲೇಜುಗಳ ಸಿಬ್ಬಂದಿಗಳಿಗೆ ತರಬೇತಿ ನೀಡುವ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. |
| 50 | 25-05-2021 TO 30-09-2021 | ತುಮಕೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದು, ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು, ಕುಲಸಚಿವರು, ಉಪಕುಲಸಚಿವರು ಈ ವಿಚಾರ ಗೋಷ್ಠಿಯ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 51 | 29-09-2021, 30-09-2021 ಮತ್ತು 05-10-2021 | ತುಮಕೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವಿಷಯವಾರು ಕಾರ್ಯಗಾರವನ್ನು ಎಲ್ಲಾ ವಿಷಯ ಉಪನ್ಯಾಸಕರುಗಳಿಗೆ ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ರಾಜ್ಯಮಟ್ಟದ ವಿಷಯ ತಜ್ಞರ ಸಮಿತಿ ಸದಸ್ಯರು, Board of Studies ಅಧ್ಯಕ್ಷರು ಭಾಗವಹಿಸಿದ್ದರು. |

Executive Director
rnataka State Higher Education Council

| | | |
|---|---|---|
| 52 | | ತುಮಕೂರು ವಿಶ್ವವಿದ್ಯಾನಿಲಯವು NEP-2020 ಗೆ ಸಂಬಂಧಿಸಿದ ಸುದ್ದಿಗಳನ್ನು ಪತ್ರಿಕೆಗಳಲ್ಲಿ, ಲೇಖನಗಳನ್ನು ಮತ್ತು ಕರಪತ್ರಗಳನ್ನು ಸಿದ್ದಪಡಿಸಿ ಬಿಡುಗಡೆಗೊಳಿಸಲಾಯಿತು. |
| 53 | 21-08-2021 ಮತ್ತು 27-08-2021 | ತುಮಕೂರು ವಿಶ್ವವಿದ್ಯಾನಿಲಯವು ಎಲ್ಲಾ Board of Studies ನ ಸದಸ್ಯರುಗಳಿಗೆ ಕಾರ್ಯಗಾರವನ್ನು ಏರ್ಪಡಿಸಿದ್ದು, ಸದರಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು ಮತ್ತು ಇತರರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 54 | 20-08-2021 | ತುಮಕೂರು ವಿಶ್ವವಿದ್ಯಾನಿಲಯವು NEP ಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ Youtube video-Radio-TV talks ಗಳು TV ಚರ್ಚೆಗಳನ್ನು ಏರ್ಪಡಿಸಿದ್ದರು. |
| 55 | 22-08-2021 | ತುಮಕೂರು ವಿಶ್ವವಿದ್ಯಾನಿಲಯವು NEP ಬಗ್ಗೆ Video ಒಂದನ್ನು ಸಿದ್ದಪಡಿಸಿ ವಿದ್ಯಾರ್ಥಿಗಳಲ್ಲಿ, ಪೋಷಕರು ಮತ್ತು ಬೋಧಕರಿಗೆ NEP ಬಗ್ಗೆ ಜಾಗೃತಿ ಮೂಡಿಸುವ Video ಅನ್ನು ಸಿದ್ದಪಡಿಸಲಾಗಿದೆ. |
| 56 | ಆಗಸ್ಟ್ ಕೊನೆಯ ವಾರ | ತುಮಕೂರು ವಿಶ್ವವಿದ್ಯಾನಿಲಯವು NEP ಗೆ ಸಂಬಂಧಿಸಿದ ಪ್ರಮುಖ ಅಂಶಗಳ ಬಗ್ಗೆ Brochures, Posters, Pamphlets ಗಳಲ್ಲಿ ವಿವರಿಸಿ ವಿತರಿಸಲಾಯಿತು. |
| 57 | 24-08-2021 ಮತ್ತು 25-08-2021 | ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ರ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪ್ರೊ.ಅಶೋಕ್ ಡಿಸೋಜ, ಪ್ರೊ.ಚಂದ್ರಿಕ ಕೆ.ಬಿ, ಪ್ರೊ.ಗಂಗಾಧರಯ್ಯ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 58 | 17-09-2021 | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು ಏರ್ಪಡಿಸಿದ್ದು, Dr.P.G.Tadasad ಈ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 59 | 24-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು ರಾಜ್ಯಮಟ್ಟದಲ್ಲಿ Highlights and Implementation of National Education Policy-2020 ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರವನ್ನು ರಾಜ್ಯದ ಉಪಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರಾದ ಡಾ॥ ಸಿ.ಎನ್. ಅಶ್ವಥನಾರಾಯಣ್, ಯು.ಜಿ.ಸಿ.ಯ ಅಧ್ಯಕ್ಷರಾದ ಶ್ರೀ.ಡಿ.ಪಿ.ಸಿಂಗ್, ಯು.ಜಿ.ಸಿ ಯ ಉಪಾಧ್ಯಕ್ಷರಾದ ಡಾ॥ ಭೂಷಣ್ ಪಟವರ್ಧನ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |

Executive Director
Karnataka State Higher Education Council

| | | |
|---|---|---|
| 60 | 24-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP-Transformational Education Policy ಬಗ್ಗೆ ಕಾರ್ಯಗಾರವನ್ನು ಏರ್ಪಡಿಸಿದ್ದು, ಪ್ರೊ.ಕೆ.ಸಿದ್ದಪ್ಪ ಮತ್ತು ಡಾ॥ಕೆ ಗೀತಾರಾಮಾನುಜಂ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 61 | 25-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP ಬಗ್ಗೆ Structural and Curriculum Reforms in Education ಈ ವಿಷಯದಲ್ಲಿ ಕಾರ್ಯಗಾರವನ್ನು ಏರ್ಪಡಿಸಿದ್ದು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದ ಶ್ರೀ. ಸತೀಶ್ ಕುಮಾರ್, ಪ್ರೊ.ಆರ್.ವೆಂಕಟರಾವ್, ಪ್ರೊ.ಎಂ.ಕೆ.ಸೂರಪ್ಪ, ಡಾ॥ ಮಾನಸ ನಾಗಭೂಷಣ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. |
| 62 | 26-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP-Governance Monitoring System ಈ ವಿಷಯದಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ ಪ್ರೊ.ಬಿ.ಬಲರಾಮ್. ಪ್ರೊ.ಡಾ॥ ಸಚ್ಚಿದಾನಂದ, ಪ್ರೊ.ಗುರುರಾಜ್ ಕರ್ಜಗಿ, ಪ್ರೊ.ಸಂದೀಪ್ ಶಾಸ್ತ್ರೀ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. |
| 63 | 27-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP-Digital Education: Technology Integration ಎಂಬ ವಿಷಯದ ಕುರಿತು ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಪ್ರೊ.ಅನಿಲ್ ಸಹಸ್ರಾಬುಧೆ, ಪ್ರೊ.ಹೆಚ್.ಪಿ.ಕಿಂಚ್, ಪ್ರೊ.ಹೆಚ್. ಎ.ರಂಗನಾಥ್, ಶ್ರೀ. ಡಾ॥ ಸಿ.ಎನ್.ಮಂಜುನಾಥ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. |
| 64 | 28-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP-Philanthropy in Education ಈ ವಿಷಯದಲ್ಲಿ ರಾಜ್ಯಮಟ್ಟದ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಾಗಾರದಲ್ಲಿ ಪ್ರೊ.ಎಸ್.ಸಿ.ಶರ್ಮಾ, ಪ್ರೊ.ಎಂ.ಕೆ.ಶ್ರೀಧರ್, ಡಾ॥ಋಷಿಕೇಶ್, ಶ್ರೀಮತಿ ಪ್ರತಿಮಾರಾಮ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. |
| 65 | 27-08-2020 | ಬೆಂಗಳೂರು ವಿಶ್ವವಿದ್ಯಾನಿಲಯವು NEP and UUCMS ಬಗ್ಗೆ ವಿಶ್ವವಿದ್ಯಾನಿಲಯ ಮಟ್ಟದ ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದು, ಪ್ರೊ.ಕೆ.ಆರ್.ವೇಣುಗೋಪಾಲ್ ಮತ್ತು ಡಾ॥ಭಾಗ್ಯವಾನ್ ಅಲ್ಲದೆ ಎಲ್ಲಾ ಕಾಲೇಜು ಪ್ರಾಂಶುಪಾಲರುಗಳು ಭಾಗವಹಿಸಿದ್ದರು. |
| 66 | 23-09-2021 | ಬೆಂಗಳೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದ ಕನ್ನಡ ಉಪಾನ್ಯಾಸಕರಿಗೆ ಪದವಿ ಮಟ್ಟದ ಕಾಲೇಜುಗಳ ಕನ್ನಡ ಉಪನ್ಯಾಸಕರುಗಳು ಕಾರ್ಯಗಾರವನ್ನು ಏರ್ಪಡಿಸಿದ್ದು, ಈ |

Executive Director
State Higher Education Council

| | | |
|---|---|---|
| | | ಕಾರ್ಯಗಾರದಲ್ಲಿ ಡಾ|| ರಾಮಲಿಂಗಪ್ಪ ಬೇಗೂರು, ಡಾ||ಲಿಂಗರಾಜಯ್ಯ, ಡಾ||ಸಿ.ನಾಗಭೂಷಣ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 67 | 20-09-2021 | ಬೆಂಗಳೂರು ವಿಶ್ವವಿದ್ಯಾನಿಲಯವು BCA & VSC ಗಳಿಗೆ NEP-Syllabus ಗಳ ಕಾರ್ಯಗಾರವನ್ನು ಏರ್ಪಡಿಸಿದ್ದು, ಡಾ||ಮುರಳೀಧರ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 68 | 08-09-2021 | ಬೆಂಗಳೂರು ವಿಶ್ವವಿದ್ಯಾನಿಲಯವು Awareness ಕಾರ್ಯಕ್ರಮವನ್ನು ಏರ್ಪಡಿಸಿದ್ದು ಈ ಕಾರ್ಯಕ್ರಮದಲ್ಲಿ ಡಾ||ರಾಮಚಂದ್ರ ಗೌಡ ಮತ್ತು ಡಾ||ಅನಿತಾ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 69 | 09-09-2021 | ಬೆಂಗಳೂರು ವಿಶ್ವವಿದ್ಯಾನಿಲಯವು NEP 2020-Need of the Hour ಈ ವಿಷಯದ ಬಗ್ಗೆ ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದು, ಡಾ|| ಸಿ.ಸೋಮಶೇಖರ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 70 | 25-08-2021 | ಬೆಂಗಳೂರು ವಿಶ್ವವಿದ್ಯಾನಿಲಯವು ರಾಜ್ಯ ಮಟ್ಟದ Curriculum development program in Women's studies under NEP ಈ ವಿಷಯದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಪ್ರೊ.ಸಿದ್ದೇಗೌಡ, ಪ್ರೊ.ವೇಣುಗೋಪಾಲ್, ಪ್ರೊ.ಇಂದಿರಾ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 71 | 16-09-2020 | ಈ ದಿನಾಂಕದಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳು NEP-Awareness ಬಗ್ಗೆ ಪತ್ರಿಕಾಗೋಷ್ಠಿಯನ್ನು ನಡೆಸಿದರು. |
| 72 | 27-09-2021 | ಬೆಂಗಳೂರು ವಿಶ್ವವಿದ್ಯಾನಿಲಯ ಇವರು B.Sc Zoology and Genetics ವಿಷಯದಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸಮ್ಮೇಳನ ನಡೆಸಿ ಈ ಸಮ್ಮೇಳನದಲ್ಲಿ ಡಾ|| ಪಿ.ಮಹಬೂಬ್ ಪಾಷ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. |
| 73 | 29-10-2021 | ದಿಶಾ ಭಾರತಿ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ರಾಷ್ಟ್ರೀಯ ನೂತನ ಶಿಕ್ಷಣ ನೀತಿ NEP-2020 ರ ಬಗ್ಗೆ ರಾಷ್ಟ್ರೀಯ ಮಟ್ಟದ Webinar ನ್ನು Vikasaan:NEP-2020-Vision to Action ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ರಾಷ್ಟ್ರದಾದ್ಯಂತ 1,500 ಜನ Faculty ಸದಸ್ಯರು ಭಾಗವಹಿಸಿದ್ದರಲ್ಲದೆ, Face book ಜಾಲತಾಣದಲ್ಲಿ 60,000 ಜನರಿಗೆ ZOOM ಮೂಲಕ ಈ ಕಾರ್ಯಕ್ರಮವನ್ನು ವೀಕ್ಷಿಸಿದರು. |
| 74 | 04-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ Science ವಿಭಾಗದ Deans, Chairpersons & Co-ordinators of Faculty ಗಳಿಗಾಗಿ |

Executive Director
Karnataka State Higher Educati

| | | |
|---|---|---|
| | | ಕಾರ್ಯಗಾರವನ್ನು ಏರ್ಪಡಿಸಿದ್ದು, ಈ ಕಾರ್ಯಗಾರದಲ್ಲಿ NEP ಬಗ್ಗೆ ಪ್ರೊ.ಲಿಂಗರಾಜು ಗಾಂಧಿ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 75 | 05-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು Arts Faculty ಗಾಗಿ ಕಾರ್ಯಗಾರವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಗಾರದಲ್ಲಿ ಪ್ರೊ.ಲಿಂಗರಾಜು ಗಾಂಧಿ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. |
| 76 | 05-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ವಾಣಿಜ್ಯ ವಿಭಾಗದ Faculty ಗಳಿಗಾಗಿ NEP ಬಗ್ಗೆ ಪ್ರೊ.ಲಿಂಗರಾಜು ಗಾಂಧಿಯವರು ಕಾರ್ಯಗಾರದಲ್ಲಿ ಮಾತನಾಡಿದರು. |
| 77 | 18-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ತಮ್ಮ ವ್ಯಾಪ್ತಿಯ ಅಂಗೀಕೃತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ NEP ಬಗ್ಗೆ Virtual meeting ಮುಖಾಂತರ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಗಾರದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರು, ಕಾರ್ಯನಿರ್ವಾಹಕ ನಿರ್ದೇಶಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 78 | 23-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು NEP ಕಾರ್ಯಾನುಷ್ಠಾನದ ಬಗ್ಗೆ ಮೊದಲ ಸಭೆ ನಡೆಸಿ ಈ ಸಭೆಯಲ್ಲಿ ಉಪಕುಲಪತಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 79 | 24-08-2021 | NEP ಬಗ್ಗೆ Autonomous College ಗಳ ಪ್ರಾಂಶುಪಾಲರುಗಳೊಂದಿಗೆ ಸಭೆ ನಡೆಸಿ ಈ ಸಭೆಯಲ್ಲಿ ಉಪಕುಲಪತಿಗಳಾದ ಪ್ರೊ.ಲಿಂಗರಾಜು ಗಾಂಧಿ ಯವರು ಮಾತನಾಡಿದರು. |
| 80 | 30-08-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯದ BOS English chairperson ಗಳು ಇಂಗ್ಲೀಷ್ ವಿಷಯದ ಬಗ್ಗೆ ಹಾಗೂ ಇಂಗ್ಲೀಷ್ ಪಠ್ಯಕ್ರಮಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಪ್ರೊ.ಲಿಂಗರಾಜು ಗಾಂಧಿಯವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದರು. |
| 81 | 29-09-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು, ವಿಶ್ವವಿದ್ಯಾನಿಲಯ ಮಟ್ಟದಲ್ಲಿ Governing the CBCS Scheme with Multiple entry and exit in UG & PG ಈ ಕಾರ್ಯಕ್ರಮದಲ್ಲಿ ಪ್ರೊ.ಲಿಂಗರಾಜು ಗಾಂಧಿಯವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದರು. |

Executive Director
(a State Higher Education Council

| | | |
|---|---|---|
| 82 | 29-09-2021 | Academic Council ಸಭೆಯಲ್ಲಿ Draft regulation Governing the CBCS Scheme with multiple entry and exit in UG & PG ಈ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರದಲ್ಲಿ ಪ್ರೊ.ಲಿಂಗರಾಜು ಗಾಂಧಿಯವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದರು. |
| 83 | 01-09-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಬೃಂದಾವನ ಗ್ರೂಪ್ ಸಂಸ್ಥೆಗಳ ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ಬಗ್ಗೆ ಕಾರ್ಯಗಾರವನ್ನು ಏರ್ಪಡಿಸಿ ಈ ಕಾರ್ಯಗಾರದಲ್ಲಿ ಉಪಕುಲಪತಿಗಳು ಸೇರಿದಂತೆ ಅನೇಕ ಶಿಕ್ಷಣ ತಜ್ಞರಿಂದ NEP-2020 ಬಗ್ಗೆ ಮಾತನಾಡಿಸಲಾಯಿತು. |
| 84 | 03-09-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯವು Mount Carmel College ಸಹಯೋಗದೊಂದಿಗೆ ರಾಷ್ಟ್ರಮಟ್ಟದಲ್ಲಿ NEP-2020 ಬಗ್ಗೆ ವಿಚಾರಗೋಷ್ಠಿ ಯನ್ನು ಏರ್ಪಡಿಸಿದ್ದು, ಈ ವಿಚಾರಗೋಷ್ಠಿಯಲ್ಲಿ ಉನ್ನತ ಶಿಕ್ಷಣ ಸಚಿವರು, ಅನುಭವಸ್ಥ ಶಿಕ್ಷಣ ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. |
| 85 | 07-9-2021 | ಬೆಂಗಳೂರು ನಗರ ವಿಶ್ವವಿದ್ಯಾನಿಲಯದ Bio-Chemistry ವಿಭಾಗವು Model programme Structures of B.Sc Degree under NEP-2020 ಈ ವಿಷಯದಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕಾರ್ಯಗಾರವನ್ನು ಏರ್ಪಡಿಸಲಾಗಿದ್ದು, ಈ ಕಾರ್ಯಗಾರದಲ್ಲಿ ಅನುಭವಸ್ಥ ಶಿಕ್ಷಣ ತಜ್ಞರು ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದರು. |
| 86 | 15-09-2021 ಮತ್ತು 25-09-2021 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ರಾಜ್ಯ ಮಟ್ಟದ NEP ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಗಾರವನ್ನು ಹಮ್ಮಿಕೊಂಡಿತ್ತು. |
| 87 | 15-09-2021 | ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಗಾರವನ್ನು NEP-2020 ಗೆ ಸಂಬಂಧಪಟ್ಟಂತೆ Transformative Educational Policy for Aspirational India ಈ ವಿಷಯದ ಬಗ್ಗೆ ಕಾಲೇಜುಗಳ Faculty ಗಳಿಗೆ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. |
| 88 | 18-09-2021 | ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರು ರಾಜ್ಯ ಮಟ್ಟದ ಕಾರ್ಯಗಾರವನ್ನು NEP-2020 ಗೆ ಸಂಬಂಧಪಟ್ಟಂತೆ ಏರ್ಪಡಿಸಿತ್ತು. |
| 89 | 22-09-2021 | ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ NEP-2020 ಗೆ ಸಂಬಂಧಪಟ್ಟಂತೆ College Faculty ಗಳಿಗಾಗಿ ಕಾರ್ಯಗಾರವನ್ನು ಏರ್ಪಡಿಸಿತ್ತು. |
| 90 | 18-02-2021 | ದಾವಣಗೆರೆ ವಿಶ್ವವಿದ್ಯಾನಿಲಯವು NEP-2020 ಬಗ್ಗೆ ತನ್ನ ವ್ಯಾಪ್ತಿಯ ಎಲ್ಲಾ ಪ್ರಾಂಶುಪಾಲರುಗಳಿಗೆ ಕಾರ್ಯಗಾರವನ್ನು ಏರ್ಪಡಿಸಿತ್ತು. |

Executive Director
Karnataka State Higher Education (

| | | |
|---|---|---|
| 91 | 28-07-2021 | ಕನ್ನಡ ವಿಶ್ವವಿದ್ಯಾನಿಲಯವು NEP-2020 ಬಗ್ಗೆ ಆಂಧ್ರಪ್ರದೇಶದ Tribal ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಒಂದು ದಿನದ ರಾಷ್ಟ್ರೀಯ Webinar ಮೂಲಕ ಕಾರ್ಯಕ್ರಮವನ್ನು ಏರ್ಪಡಿಸಿತ್ತು. |
| 92 | 28-10-2021 | ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾನಿಲಯ, ವಿಜಯನಗರ ವಿಶ್ವವಿದ್ಯಾನಿಲಯವು ಬಳ್ಳಾರಿ Technology ಸಂಸ್ಥೆಯೊಂದಿಗೆ ಹಾಗೂ Indian Education Board ಇವರ ಸಹಯೋಗದೊಂದಿಗೆ NEP-2020 ಬಗ್ಗೆ ವಿಚಾರಗೋಷ್ಠಿಯನ್ನು ಏರ್ಪಡಿಸಿತ್ತು. |
| 93 | 11-11-2021 ಮತ್ತು 12-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ರವರು Governance Practices of NEP Preparation of IDP Overview of OBE for the Principals, Deans and Chairpersons of schools/Departments, Directors of Cells ಇವರುಗಳಿಗೆ BMS College of Engineering ಒಂದು ವಿವಿಧ ಕಾರ್ಯಕ್ರಮನ್ನು ಏರ್ಪಡಿಸಲಾಗಿತ್ತು. |
| 94 | 15-11-2021 ಮತ್ತು 16-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು KLS Gogte Institute of Technology ಬೆಳಗಾವಿ ಇಲ್ಲಿ ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಿತ್ತು. |
| 95 | 25-11-2021 ಮತ್ತು 26-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಈ ದಿನಾಂಕದಂದು BIET ದಾವಣಗೆರೆ ಇಲ್ಲಿ ಒಂದು ದಿನದ ಕಾರ್ಯಕ್ರಮನ್ನು ಏರ್ಪಡಿಸಿತ್ತು. |
| 96 | 15-11-2021 ಮತ್ತು 17-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು NEP-2020 ಗೆ ಸಂಬಂಧಪಟ್ಟಂತೆ VTU Region ಕಲ್ಬುರ್ಗಿಯಲ್ಲಿ ಕಾರ್ಯಕ್ರಮನ್ನು ಏರ್ಪಡಿಸಿತ್ತು. |
| 97 | 23-11-2021 to 24-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು NEP-2020 ಗೆ ಸಂಬಂಧಪಟ್ಟಂತೆ VTU Regional Centre, ಬೆಳಗಾವಿ ಇಲ್ಲಿ ಕಾರ್ಯಕ್ರಮನ್ನು ಏರ್ಪಡಿಸಿತ್ತು. |
| 98 | 29-11-2021 to 30-11-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು NEP-2020 ಬಗ್ಗೆ VTU affiliated College ಮೈಸೂರಿನಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು. |
| 99 | 03-12-2021 to 04-12-2021 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು NEP-2020 ಕಾರ್ಯಾನುಷ್ಠಾನಕ್ಕೆ ಸಂಬಂಧಪಟ್ಟಂತೆ VTU Extension centre, Mangaluru ನಲ್ಲಿ Principals, Deans, Faculty Members ಗಳಿಗೆ ಕಾರ್ಯಕ್ರಮವನ್ನು ಏರ್ಪಡಿಸಿತ್ತು. |

arnataka State Higher Education Council